

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 286 Wednesday 24-07-2024 E-mail : maruti.b.hosamani76@gmail.com Page: 4 Price : Rs. 1/-


## ಬೆಂಗಳೂರು ವಿ.ವಿ ಸಂಶೋಧನಾ ವಿದ್ಯಾರ್ಥಿ ಶ್ರೀನಿವಾಸ ಎನ್‌ರವರಿಗೆ "ಕನ್ನಡ ಸಾಹಿತ್ಯ ಚಿನ್ನ ಪ್ರಶಸ್ತಿ" ಪ್ರಧಾನ

**ಬೆಂಗಳೂರು :** ಬೆಂಗಳೂರು ವಿಶ್ವ ವಿದ್ಯಾಲಯ ಜ್ಞಾನ ಭಾರತಿ ಆವರಣದಲ್ಲಿರುವ ಪ್ರೊ. ವೆಂಕಟಗಿರಿಗೌಡ ಸಭಾಂಗಣದಲ್ಲಿ ಆಯೋಜಿಸಿದ ಸಂವಹನ ವಿಭಾಗದ ಸುವರ್ಣ ಮಹೋತ್ಸವದ (1973–2023) ಅಂಗವಾಗಿ 'ಮೀಡಿಯಾ ಸ್ಫಿಯರ್– 2024, "ಭಾರತೀಯ ಮಾಧ್ಯಮ ಉದ್ಯಮದ ರೂಪಾಂತರ" ರಾಷ್ಟ್ರೀಯ ಸಮ್ಮೇಳನವನ್ನು ಬೆಂಗಳೂರು ವಿವಿಯ ಸಂವಹನ ವಿಭಾಗ, ಭಾರತೀಯ ಸಂವಹನ ಕಾಂಗ್ರೆಸ್ (ಐಸಿಸಿ) ಹಾಗೂ ಕರ್ನಾಟಕ ರಾಜ್ಯ ಪತ್ರಿಕೋದ್ಯಮ ಮತ್ತು ಸಂವಹನ ಶಿಕ್ಷಕರ ಸಂಘ (ಕೆಎಸ್




ಜೆಸಿಟಿಎ) ಸಹಯೋಗದೊಂದಿಗೆ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ನಡೆಸಲಾಯಿತು. ಇದರಪ್ರಯುಕ್ತಕನ್ನಡಸಾಹಿತ್ಯದಲ್ಲಿ ಸಾಧನೆಗೈದ ಬೆಂಗಳೂರು ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಸಂಶೋಧನಾವಿದಾರ್ಥಿ ಶ್ರೀನಿವಾಸ ಎನ್ ರವರಿಗೆ: 'ಕನ್ನಡ ಸಾಹಿತ್ಯಚಿನ್ನಪ್ರಶಸ್ತಿ'ಪ್ರಧಾನವನ್ನು ಕೊಪ್ಪಳ ವಿಶ್ವ ವಿದ್ಯಾಲಯದ ಕುಲಪತಿಗಳಾದ ಪ್ರೊ.ಬಿ.ಕೆ. ರವಿ, ಮಾಧ್ಯಮ ಅಕಾಡೆಮಿಯ ಅಧ್ಯಕ್ಷರಾದ ಆಯೇಷ ಖಾನಂ, ಬೆಂವಿ.ವಿಯ ಕುಲಸಚಿವ ಶೇಕ್ ಲತೀಫ್, ಮೌಲ್ಯ ಮಾಪನ ಕುಲಸಚಿವ ಪ್ರೊ. ಶ್ರೀನಿವಾಸ್ ಚೌಡಪ್ಪ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ. ಬಿ. ಶೈಲಶ್ರೀ, ಭೂಪಾಲ್ ನ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ಮಖನ್ ಲಾಲ್ ಚತುರ್ವೇದಿ, ರಾಷ್ಟ್ರೀಯ ವಿಶ್ವ ವಿದ್ಯಾಲಯದ ಕುಲಪತಿಗಳಾದ ಪ್ರೊ. ಕೆ.ಜಿ. ಸುರೇಶ್, ಪಶ್ಚಿಮ ಬಂಗಾಳದ ವಿಶ್ವ ಭಾರತಿ ಕೇಂದ್ರೀಯ ವಿಶ್ವ ವಿದ್ಯಾಲಯದ ಮುಖ್ಯಸ್ಥರಾಗಿರುವ ಪ್ರೊ. ಬಿಪ್ಲಾಬ್ ಲೋಹೋ ಚೌದರಿ, (ಒಡಿಶಾ)ಭುವನೇಶ್ವರ್‌ನಉತ್ಕಲ್ ವಿಶ್ವವಿದ್ಯಾಲಯದ ಮಾಧ್ಯಮ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ. ಉಪೇಂದ್ರ ಪಾಢಿ, ವಿವಿಯ ಬೋಧಕ ಮತ್ತು ಭೋಧಕೇತರ ವರ್ಗದವರು, ಸ್ನಾತಕೋತ್ತರ ಮತ್ತು ಸಂಶೋಧನಾರ್ಥಿಗಳು, ಮತ್ತಿತರರುಸಮ್ಮುಖದಲ್ಲಿಸ್ಮರಣಿಕೆ ನೀಡಿ ಗೌರವಿಸಲಾಯಿತು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಎಂ.ಎಂ. ಶರ್ಮಾ ಬೆಳಗಾವಿ.**

## ಕಾಳಾಪುರ ಕ್ಯಾಂಪ್ ಶಾಲೆಯಲ್ಲಿ ನೂತನವಾಗಿ ಎಸ್.ಡಿ.ಎಂ.ಸಿ ರಚಿಸಲಾಯಿತು

**ಕಾಳಾಪುರ :** ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಕಾಳಾಪುರದಲ್ಲಿ ದಿನಾಂಕ 22–07–2024 ರಂದು ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಕಾಳಾಪುರ ಕ್ಯಾಂಪ್ ಶಾಲೆಯಲ್ಲಿ ನೂತನ ಎಸ್.ಡಿ.ಎಂ.ಸಿ ರಚನೆ ಮಾಡಲಾಯಿತು.

ಎಸ್.ಡಿ.ಎಂ.ಸಿಯ ಅಧ್ಯಕ್ಷರಾಗಿ ಶ್ರೀ ಮಂಜಪ್ಪ ಉಪಾಧ್ಯಕ್ಷರಾಗಿ ಶ್ರೀಮತಿ ಮಂಗಳಮ್ಮ ರವರನ್ನು ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಬಿಆರ್ಪಿಗಳಾದ ರವೀಂದ್ರನಾಥ್ ಹಾಗೂ ಸಿ ಆರ್ ಪಿ ಗಳಾದ ಕೊಟ್ರೇಶ್ ಕಾಳಾಪುರ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರು ಮತ್ತು ಕಾಳಾಪುರ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಬಿ ಸುರೇಶ್ ಹಾಗೂ ಉಪಾಧ್ಯಕ್ಷರಾಗಿ ಪೂಜಾರ್ ಮಂಜುನಾಥ್ ಹಾಗೂ ರಿಪೋರ್ಟ್ ವಾರ ಪತ್ರಿಕೆಯ ವರದಿಗಾರರಾದ ಪಿ ಶ್ರೀಕಾಂತ್ ಮತ್ತು




ಎಸ್.ಡಿ.ಎಂ.ಸಿ ಯ ಸರ್ವ ಸದಸ್ಯರು ಹಾಗೂ ಸಮಸ್ತ ಪೋಷಕ ವರ್ಗದವರು ಪಾಲ್ಗೊಂಡಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್ ಕುಮಾರ್ ಸಿ.ಕೊಟ್ಟೂರು.**

## ಇಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘ ಕೂಡ್ಲಿಗಿ ತಾಲೂಕಾ ಘಟಕದಿಂದ–ವಿಶ್ವ ಪತ್ರಿಕಾ ದಿನಾಚರಣೆ

**ಕೂಡ್ಲಿಗಿ :** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘ ತಾಲೂಕಾ ಘಟಕ ಕೂಡ್ಲಿಗಿ ವತಿಯಿಂದ ವಿಶ್ವ ಪತ್ರಿಕಾ ದಿನಾಚರಣೆ ಹಾಗೂ ಕ. ನಿ. ಪ.ಧ್ವನಿ ಸಂಘದ ಕಛೇರಿ ಉದ್ಘಾಟನೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ಸಮಾರಂಭ ಕಾರ್ಯಕ್ರಮ ಜ್ಞಾನ ಮಂಟಪ ಶಾಲೆ ಗುಂಡಿನ ಹೊಳೆ ನಡೆಯಲಿದ್ದು. ದಿವ್ಯ ಸಾನಿಧ್ಯ ಷ.ಬ್ರ. ಪ್ರಶಾಂತ ಸಾಗರ ಶಿವಾಚಾರ್ಯ ಮಹಾಸ್ವಾಮಿಗಳು. ಶ್ರೀ ಐಮಡಿ ಶರಣಾರ್ಯರು ಧರ್ಮಾಧಿಕಾರಿಗಳು ದಾಸೋಹ ಮಠ ಕಾನಮಡಗು. ಹಾಗೂ ಕಾರ್ಯಕ್ರಮದ ಉದ್ಘಾಟನೆ ಸನ್ಮಾನ್ಯ ಡಾ. ಎನ್. ಟಿ. ಶ್ರೀನಿವಾಸ್ ಶಾಸಕರು ಕೂಡ್ಲಿಗಿ ವಿಧಾನಸಭಾ ಕ್ಷೇತ್ರ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘ ರಾಜ್ಯಾಧ್ಯಕ್ಷರಾದ ಬಂಗ್ಲೆ ಮಲ್ಲಿಕಾರ್ಜುನ, ಜಿ ಉಮೇಶ್ ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಸಂಸ್ಥಾಪಕರು ಹಾಗೂ ಅಧ್ಯಕ್ಷರು ಜ್ಞಾನ ಮಂಟಪ ಎಜುಕೇಶನ್ ಟ್ರಸ್ಟ್. ಅಧ್ಯಕ್ಷತೆ ತಾಲೂಕು ಘಟಕದ ಬಾಣದ ಶಿವಮೂರ್ತಿ, ವಿಶೇಷ ಉಪನ್ಯಾಸ ರೂಪ ಶಿಂತ್ರಿ, ಚಿಕ್ಕೋಡಿ, ಸೇರಿದಂತೆ ಕೂಡ್ಲಿಗಿ ತಾಲೂಕಿನ ಎಲ್ಲ ಜನ ಪ್ರತಿನಿಧಿಗಳು, ವಿವಿಧ ಸಂಘ ಸಂಸ್ಥೆಗಳು, ಸಮಾಜ ಸೇವಕರು, ಸುದ್ದಿ ಪತ್ರಿಕೆ ಓದುಗಾರರಿಗೆ, ಸುದ್ದಿ ಪತ್ರಿಕೆ ವಿತರಕರಿಗೆ ಸೇರಿದಂತೆ ಅನೇಕ ಸಾಧಕರಿಗೆ ಗೌರವಿಸಲಾಗುವುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ಅಧ್ಯಕ್ಷರಾದ ಬಾಣದ ಶಿವಮೂರ್ತಿ ತಿಳಿಸಿದ್ದಾರೆ.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್.ಕೆ.ಹೊಸಹಳ್ಳಿ.**

## ವಯೋವೃದ್ಧರ ಆರೋಗ್ಯ ಆರೈಕೆ ರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ

**ಹೊನ್ನಾಕಟ್ಟಿ :** ಹೊನ್ನಾಕಟ್ಟಿ ಗ್ರಾಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಸಹ ಯೋಗದಲ್ಲಿ "ರಾಷ್ಟ್ರೀಯ ವಯೋವೃದ್ಧರ ಆರೋಗ್ಯ ಕ್ಷೇಮಾಭಿವೃದ್ಧಿ ಕಾರ್ಯಕ್ರಮ" ಅಡಿಯಲ್ಲಿ "ವಯೋವೃದ್ಧರ ಆರೋಗ್ಯಆರೈಕೆ'ಜಾಗೃತಿಆಯೋಜಿಸಲಾಗಿತ್ತು. ಗ್ರಾಮದ ಶತ ವರ್ಷ ಪೂರೈಸಿದ ಹಿರಿಯ ಚೇತನ ಶ್ರೀ ಶಿವನಪ್ಪ ವೆಂಕಪ್ಪ ಲೊಂಡವೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾಸ್ತಾವಿಕವಾಗಿ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್ ಎಸ್ ಅಂಗಡಿಯವರು, "ವೃದ್ಧರ ಹಿರಿಯ ಚೇತನಗಳ ಆರೋಗ್ಯ ರಕ್ಷಿಸೋಣ" "ಜೀವನ ಮಟ್ಟ ಸುಧಾರಣೆಗೆ ಸಹಕರಿ ಸೋಣ" ಹಾಗೂ ಆರೋಗ್ಯ ಇಲಾಖೆ ಸೌಲಭ್ಯಗಳನ್ನು ಸದುಪಯೋಗ ಪಡೆದು ಕೊಳ್ಳಬೇಕು. ಎಂಬ ಘೋಷಣೆಯೊಂದಿಗೆ ಗ್ರಾಮದ 60 ವರ್ಷ ಮೇಲ್ಪಟ್ಟವರು ಹಿರಿಯ ನಾಗರಿಕರ ಹಿರಿಯ ಚೇತನಗಳು ವಯೋವೃದ್ಧರು, ಇವರ ಆರೋಗ್ಯ ರಕ್ಷಣೆ ಅವಶ್ಯಕ ವಯೋವೃದ್ಧರಿಗೆ ಅಶಕ್ತತೆ ಅಸ್ವಸ್ಥತೆ ವಯೋಸಹಜ ಇದನ್ನು ತಡೆಯುವುದೇನಮ್ಮಉದ್ದೇಶ,ಮಧುಮೇಹ, ರಕ್ತದೊತ್ತಡ, ಕಣ್ಣಿನ ದಂತ ಸಮಸ್ಯೆ, ಹೃದಯ ಸಂಬಂಧಿ ಕೀಲು ಮತ್ತು ಮೂಳೆ ತೊಂದರೆಗಳು,ಶ್ವಾಸಕೋಶತೊಂದರೆಮೂತ್ರ ಜನಾಕಾಂಗಗಳ ತೊಂದರೆ ಮರೆವು ಮಾನಸಿಕ ಇತರ ತೊಂದರೆಗಳು ಇತರೆ ಆರೋಗ್ಯದ ಸಮಸ್ಯೆಗಳಿರುತ್ತವೆ ವಯೋವೃದ್ಧರು ಆರೋಗ್ಯ ರಕ್ಷಣೆಗೆ ಸಮಸ್ಯೆಗಳಿಗೆ ಎಲ್ಲಾ ಪ್ರಾಥಮಿಕಆರೋಗ್ಯಕೇಂದ್ರ,ಸರಕಾರಿಉನ್ನತ ಆಸ್ಪತ್ರೆಯಲ್ಲಿ ವಯೋವೃದ್ಧರ ಆರೋಗ್ಯ ಆರೈಕೆ ಚಿಕಿತ್ಸೆ ಔಷಧೋಪಚಾರ ಸಲಹೆ ಉಚಿತವಾಗಿರುತ್ತದೆ. ಹಿರಿಯ ಚೇತನಗಳಿಗೆ ಆರೋಗ್ಯರಕ್ಷಣೆಮಾಹಿತಿನೀಡಿದರು.ಹಿರಿಯ ಚೇತನಗಳ ವಯೋವೃದ್ಧರ ಆರೋಗ್ಯ ಆರೈಕೆ ರಕ್ಷಣೆ ಜಾಗೃತಿ ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯ ಚೇತನ ವಯೋವೃದ್ಧರಾದ, ಹನಮಂತ ಮಾನೋಜಿ ಚವ್ಹಾಣ, ಪರಸಪ್ಪ ಚವ್ಹಾಣ, ಭೀಮಪ್ಪ ಬರ್ಮಪ್ಪ ಹಿರೇಹಾಳ, ಬಸಪ್ಪ ದ್ಯಾಮಣ್ಣ ದಮ್ಮೂರ, ಶಂಕ್ರೆಪ್ಪ ಗುರಪ್ಪ ಬಡಿಗೇರ, ಬಾಬಣ್ಣ ಭೀ ಸೂರ್ಯವಂಶಿ, ಹನುಮಂತದಮ್ಮೂರಆರೋಗ್ಯಇಲಾಖೆಯ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಯುವಕರು ಭಾಗವಹಿಸಿದ್ದರು.

## ಬೇರೆ ರಾಜ್ಯದವರ ಗ್ರಾನೈಟ್ ಕಲ್ಲು ತೆಗೆದು ಕೊಳ್ಳಬೇಡಿ: ಕರವೇ

**ಇಲಕಲ್ಲ :** ಬೇರೆ ಬೇರೆ ರಾಜ್ಯಗಳಿಂದ ಬಂದು ಇಳಕಲ್ ನಗರದಲ್ಲಿ ಠಿಕ್ಕಾಣಿ ಹೂಡಿ ಗ್ರಾನೈಟ್ ಕಲ್ಲುಗಳ ಪ್ರದರ್ಶನ ಮತ್ತು ಮಾರಾಟ ಮಾಡುವ ಮಳಿಗೆಗಳು (ಶೋರೂಮ್) ಕುರಿತು ಚೆಕ್ ಪೋಸ್ಟ ಮಾಡುವುದು ಮತ್ತು ವ್ಯವಹಾರದಲ್ಲಿ ಗ್ರಾಹಕರಿಗೆ ಮಾಡುತ್ತಿರುವ ಮೋಸವನ್ನು ತಡೆ ಗಟ್ಟುವಂತೆ ರಾಜ್ಯ ಸರಕಾರಕ್ಕೆ ಟಿ.ಎ ನಾರಾಯಣಗೌಡ ಬಣದ ಕರ್ನಾಟಕ ರಕ್ಷಣಾ ವೇದಿಕೆ ಇಳಕಲ್ ಮತ್ತು ಹುನಗುಂದ ತಾಲೂಕಾ ಘಟಕದ ವತಿಯಿಂದ ಪ್ರತಿಭಟಿಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.



ತಮಿಳುನಾಡು, ತೆಲಂಗಾಣ, ಗುಜರಾತ,ರಾಜಸ್ಥಾನ, ಓಡಿಸಾ,ರಾಜ್ಯಗಳಿಂದ ಇಳಕಲ್ ಮತ್ತು ಹುನಗುಂದಕ್ಕೆ ಬರುವ ಕಲ್ಲಿನ ವಾಹನಗಳಿಗೆ ಬೆರಳೆಣಿಕೆ ಯಷ್ಟೆ ಬಿಲ್ಲು ಇದ್ದು ಉಳಿದ ನೂರಾರು ಕಲ್ಲು ತುಂಬಿ ಕೊಂಡು ಬರುವ ವಾಹನಗಳಿಗೆ ಯಾವುದೇ ಬಿಲ್ಲು ಇರುವುದಿಲ್ಲ.

ಗ್ರಾಹಕರಿಗೆ ಜಿ.ಎಸ್.ಟಿ 18% ರಷ್ಟು ಬಿಲ್ಲಿಗೆ ಹೆದರಿ ಬಿಲ್ಲು ಇಲ್ಲದೆ ಗ್ರಾನೈಟ್ ಕಲ್ಲುಗಳನ್ನು ರಾತ್ರಿ ಲೋಡ್ ಮಾಡಿ ಕಳಿಸುತ್ತಿರುವುದರಿಂದ ಸರಕಾರಕ್ಕೆ ಕಟ್ಟಬೇಕಾದ ರಾಜಧನ ತೆರಿಗೆಯೂಲ್ಲೂ ಮತ್ತು ಅಳತೆಯಲ್ಲೂ ಮೋಸ ಮಾಡುತ್ತಾರೆ, ಇನ್ನಿತರ ಹಲವಾರು ಆರೋಪಗಳ ಪಟ್ಟಿಯನ್ನೆ ತಹಶೀಲ್ದಾರರಿಗೆ ಸಲ್ಲಿಸಿದರು.

ಇಳಕಲ್ ತಾಲೂಕಾ ಕರವೇ ಅಧ್ಯಕ್ಷ ಮಹಾಂತಗೌಡ ವಂಕಲಕುಂಟಿ ಮಾತನಾಡಿ ಬೇರೆ ರಾಜ್ಯಗಳಿಂದ ಬಂದಿರುವವರ ಹತ್ತಿರ ಕಲ್ಲುಗಳನ್ನು ತೆಗೆದು ಕೊಳ್ಳಬೇಡಿ ಸರಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು ಕಲ್ಲು (ಶೋರೂಮ್) ದವರು ಸರಕಾರಕ್ಕಿಂತ ಭ್ರಷ್ಟಾಚಾರದಲ್ಲಿ ನಾವೇನು ಕಡಿಮೆ ಎನ್ನುವ ಹಾಗೆ ಕನ್ನಡ ಜನತೆಯನ್ನು ಮೋಸ ಮಾಡುತ್ತಾರೆ ಎಂದು ಹೇಳಿದರು.

ಹಾಗೆ ಹುನಗುಂದ ತಾಲೂಕು ಕರವೇ ಅಧ್ಯಕ್ಷ ರೋಹಿತ ಬಾರಕೇರ ಮಾತನಾಡಿದರು.

ಮನವಿಯನ್ನು ಸ್ವೀಕರಿಸಿದ ತಹಶೀಲ್ದಾರ ಸತೀಶ್ ಕೂಡಲಗಿ ಅವರು ಮನವಿಯನ್ನು ಜಿಲ್ಲಾಧಿಕಾರಿಗಳ ಮೂಲಕ ಸರಕಾರಕ್ಕೆ ಕಳಿಸುವುದಾಗಿ ಹೇಳಿದರು.

ಇಳಕಲ್ ನಗರಘಟಕ ಕರವೇ ಅಧ್ಯಕ್ಷ ಅಶೋಕ ಪುಜಾರಿ, ಯುವ ಘಟಕದ ಅಧ್ಯಕ್ಷ ಸಾಗರ ಪಟ್ಟಣಶೆಟ್ಟಿ, ಪ್ರಧಾನ ಕಾರ್ಯದರ್ಶಿ ಜಾಹೀರ ಸಂಗಮಕರ, ಸಲಿಂ ಜರದಾರಿ

ಇಳಕಲ್ ತಾಲೂಕಾ ಪ್ರಧಾನ ಕಾರ್ಯದರ್ಶಿ, ಹುಸೇನ ಸಂಧಿಮನಿ, ಮಂಜುನಾಥ ವಡ್ಡರ, ರವಿ ಕೊಪ್ಪದ, ಕೀರಣ ವಡ್ಡು, ಮಲ್ಲಪ್ಪ ಗೋರೆಬಾಳ, ಶೋಯಲ್ ಸುತಾರ, ಸಂಗಮೇಶ ಗೌತಗಿ, ದಶರಥ ವಡ್ಡರ, ಅಶೋಕ ಬೆವಿನಮಟ್ಟಿ, ಮಹಿಳೆಯರಾದ ಜ್ಯೋತಿ ಶಿಲವಂತರ, ಮಂಜುಳಾ ಅಂಗಡಿ, ಕಸ್ತೂರಿಬಾಯಿ ಮೆರವಾಡಿ, ಕಲ್ಪನಾ ಗಜೇಂದ್ರಗಡ, ಶೋಭಾ ಮುರನಾಳ, ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್ ವಾಯ್ ಕಿಳ್ಳಿ.ಇಲಕಲ್ಲ.**

## ಮದ್ಯವರ್ಜನ ಶಿಬಿರದ ಪೂರ್ವಭಾವಿ ಸಭೆ ಮತ್ತು ಆರೋಗ್ಯ ರಕ್ಷಾ ವಿಮಾ ಕ್ಲೈಮ್ ವಿತರಣಾ ಕಾರ್ಯಕ್ರಮ

**ಕೊಟ್ಟೂರು :** ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಶ್ರೀ ಮರುಳಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ದಿನಾಂಕ 2024 ರಂದು ಮದ್ಯವರ್ಜನ ಶಿಬಿರದ ಪೂರ್ವಭಾವಿ ಸಭೆ ಹಮ್ಮಿಕೊಂಡಿದ್ದು, ಈ ಸಭೆಯನ್ನು ದೀಪ ಬೆಳೆಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಈ ಕಾರ್ಯಕ್ರಮ ಕುರಿತು ಮೊದಲಿಗೆ ವಿಜಯನಗರ ಜಿಲ್ಲೆಯ ಜಿಲ್ಲಾ ನಿರ್ದೇಶಕರಾದ ಮಾನ್ಯ ಶ್ರೀ ಸತೀಶ್ ಶೆಟ್ಟಿಯವರು



ಮದ್ಯವರ್ಜನ ಶಿಬಿರದ ಪೂರ್ವಭಾವಿ ಸಭೆಯಲ್ಲಿ ಯೋಜನೆಯು ಇದುವರೆಗೆ 1823 ಮದ್ಯವರ್ಜನ ಶಿಬಿರಗಳು ಇದುವರೆಗೆ ರಾಜ್ಯದಲ್ಲಿ ನಡೆದಿವೆ. ಈ ಶಿಬಿರಕ್ಕೆ ಶಿಬಿರಾರ್ಥಿಗಳನ್ನು ಆಯ್ಕೆಯ ಮಾಡುವ ಪ್ರಕ್ರಿಯೆಯ ಬಗ್ಗೆ ಮತ್ತು ಶಿಬಿರಾರ್ಥಿಗಳನ್ನು ಕಳುಹಿಸಿ ಕೊಡುವ ಬಗ್ಗೆ ಮಾಹಿತಿಯನ್ನು ತಿಳಿಸಿದರು. ಈ ಶಿಬಿರದಿಂದ ಮದ್ಯ ವ್ಯಸನೆ ಮಾಡುವ ಸದಸ್ಯರು ಈ ಶಿಬಿರಕ್ಕೆ ಸೇರಿಸಿ ಮದ್ಯ ವ್ಯಸನ ದಿಂದ ಮುಕ್ತರಾಗಬೇಕು. ಅವರ ಕುಟುಂಬಗಳು ಕೂಡ ಒಳ್ಳೆಯ ರೀತಿಯ ಸ್ಥಾನಮಾನ ಸಿಗಬೇಕು ಮತ್ತು ಕುಟುಂಬ ಅಭಿವೃದ್ಧಿ ಆಗುತ್ತದೆ ಎಂದು ತಿಳಿಸಿದರು. ಮತ್ತು ಮದ್ಯವರ್ಜನ ಶಿಬಿರದ ಪೂರ್ವಭಾವಿ ಸಭೆಯಲ್ಲಿ ಕೊಪ್ಪಳ ಪ್ರಾದೇಶಿಕ ವ್ಯಾಪ್ತಿಯ ಜನ ಜಾಗೃತಿ ವೇದಿಕೆಯ ಯೋಜನಾಧಿಕಾರಿಗಳಾದ ಶ್ರೀ ನಾಗೇಶ್ ರವರು ಈ ಮದ್ಯವರ್ಜನ ಶಿಬಿರವನ್ನು ಯಶಸ್ವಿ ಮಾಡಲು ಗಣ್ಯರ ಸಹಕಾರ ಅತೀ ಮೂಖ್ಯವಾಗಿರುತ್ತದೆ. ಮದ್ಯವರ್ಜನ ಶಿಭಿರದ 7 ದಿನಗಳ ನಡೆಯಲಿದ್ದು, ಇದಕ್ಕೆ ಬೇಕಾದ ಪೂರ್ವ ತಯಾರಿಗಳ ಬಗ್ಗೆ ಕಮಿಟಿ ರಚನೆ ಮಾಡಿ ಅವರಿಗೆ ಜವಾಬ್ದಾರಿಗಳನ್ನು ನೀಡಿದರು. ಮತ್ತು ದಿನಾಂಕ:20.08.2024 ರಂದು ನಡೆಯುವ ಶಿಬಿರಕ್ಕೆ ಎಲ್ಲಾ ಗಣ್ಯರು ಮುಖಂಡರುಗಳು ಸೇರಿ ಯಶಸ್ವಿ ಮಾಡುವ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಮಲ್ಲ ನಾಯಕನಹಳ್ಳಿಯ ದೊಡ್ಡ ರಾಮಣ್ಣ, ಮೈದೂರು ಶಿವಣ್ಣ, ವಿವೇಕ, ಮರಿಸ್ವಾಮಿ, ತೋಟದ ರಾಮಣ್ಣ, ಉಮೇಶ್, ದೇವರಮನೆ ಕೊಟ್ರೇಶ್, ದೇವರಮನೆ ಕರಿಯಪ್ಪ, ಭರಮಣ್ಣ, ಬ್ರಹ್ಮೇಶ್, ರಮೇಶ್,ಅರಮನೆ ಮಲ್ಲಿಕಾರ್ಜುನ, ಎಮ್ ಬಿ ಶೇಖರಯ್ಯ,ಈಶ್ವರಯ್ಯ, ಸಿದ್ದಯ್ಯ,ಬಸವರಾಜು ಅಡವಿಹಳ್ಳಿ, ನೇತ್ರಾವತಿ, ಪ್ರಭಾಕರು, ಚನ್ನಪ್ಪ, ಚನ್ನಬಸಪ್ಪ, ನಾಗರಾಜು, ಗುರುಸ್ವಾಮಿ, ಮಹಾಂತೇಶ್, ಅಂಬರೇಶ್, ಸತೀಶ್ ಮತ್ತು ಸ್ವ ಸಹಾಯ ಸಂಘದ ಎಲ್ಲಾ ಸದಸ್ಯರು ಮತ್ತು ಗಣ್ಯರು ಭಾಗವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ಯೋಜನೆಯಿಂದ ಮಂಜೂರು ಆದ 42 ಸದಸ್ಯರಿಗೆ ರೂ.49200/– ಮೊತ್ತದ ಆರೋಗ್ಯ ರಕ್ಷಾ ಕ್ಲೈಮ್ ನ ಮಂಜೂರಾತಿ ಪತ್ರವನ್ನು ಕಾರ್ಯಕ್ರಮಕ್ಕೆ ಬಂದ ಗಣ್ಯರಿಂದ ವಿತರಿಸಲಾಯಿತು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್ ಕುಮಾರ್ ಸಿ. ಕೊಟ್ಟೂರು.**

## ಜಿ.ಪಂ ಸಿಇಓ ಕುರೇರ ವಿವಿದೆಡೆ ಭೇಟಿ ಪರಿಶೀಲನೆ









**ಬಾಗಲಕೋಟೆ :** ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಗುಳೇದಗುಡ್ಡ ಮತ್ತು ಬಾದಾಮಿ ತಾಲೂಕಿನ ವಿವಿಧ ಗ್ರಾಮ ಪಂಚಾಯತ, ವಿವಿಧ ಕಾಮಗಾರಿ, ಶಾಲೆ ಹಾಗೂ ತಾಲೂಕಾ ಆಸ್ಪತ್ರೆಗಳಿಗೆ ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗುಳೇದಗುಡ್ಡ ತಾಲೂಕಿನ ಹಂಗರಗಿ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಸಂಜೀವಿನ ಶೇಡ್ ಪರಿಶೀಲನೆ ನಡೆಸಿ ನಂತರ ಕೋಟೆಕಲ್ಲ ಗ್ರಾಮ ಪಂಚಾಯತಿ ವ್ಯಾಪ್ತಿಯ ಸಂಜೀವಿನಿ ಶೆಡ್, ಗ್ರಂಥಾಲಯ, ಭಾರತ ನಿರ್ಮಾಣ ರಾಜೀವ ಗಾಂಧಿ ಸೇವಾ ಕೇಂದ್ರ, ಕೂಸಿನ ಮನೆಗೆ ಭೇಟಿ ನೀಡಿ ಪರಿಶೀಲಿಸಿದರು. ಹಾನಾಪೂರ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಕರ ವಸೂಲಿ, ಇ–ಹಾಜರಾತಿಪುಸ್ತಕಪರಿಶೀಲಿಸಿದರು.ಶಾಲೆಗೆ ಭೇಟಿ ನೀಡಿ ಆಟದ ಮೈದಾನ, ಶೌಚಾಲಯ ವೀಕ್ಷಿಸಿ ಹಾನಾಪೂರ ಎಸ್.ಪಿ.ತಾಂಡಾದ ಪ್ರೌಢಶಾಲೆಯ ಮಕ್ಕಳೊಂದಿಗೆ ಸಂವಾದ ನಡೆಸಿದರು.ಗ್ರಾಮಪಂಚಾಯತನಂದಿಕೇಶ್ವರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ರೋಗಿಗೆ ನೀಡುವ ಚಿಕಿತ್ಸೆ, ಔಷಧಿ ವಿತರಣೆ ಬಗ್ಗೆ ಹಾಗೂ ಸಂಜೀವಿನಿ ಶೆಡ್ ಪರಿಶೀಲಿಸಿ ನಂತರ ಮಂಗಳೂರ ಗ್ರಾಮ ಪಂಚಾಯತಿ ವ್ಯಾಪ್ತಿಯ ಶಾಲೆಗೆ ಭೇಟಿ ನೀಡಿ ಶಾಲಾ ಕಂಪೌಂಡ ಪರಿಶೀಲಿಸಿದರು. ಹೊಸೂರ–ಕೆರೆ ಅಭಿವೃದ್ಧಿ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ಕುರೇರ ಅವರು ಕೂಲಿಕಾರ್ಮಿಕರಿಗೆ ನೀಡುವ ಕೆಲಸದ ಪ್ರಮಾಣ, ಅವಧಿ, ಮೂಲಭೂತ ಸೌಲಭ್ಯಗಳ ಬಗ್ಗೆ ಪರಿಶೀಲಿಸಿದರು.

ಬೇಲೂರಗೆ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಪ್ರೊಫೈಲ ಅಪಡೇಷನ್, ಕರ ವಸೂಲಿ, ಇ–ಹಾಜರಾತಿಪರಿಶೀಲಿಸಿದಿಬಳಿಕಬಾದಾಮಿಗೆ ಪ್ರಯಾಣ ಬೆಳೆಸಿ ಬಾದಾಮಿ ಸಾರ್ವಜನಿಕ ಆಸ್ಪತ್ರೆ ಭೇಟಿ ನೀಡಿ ಹಾಜರಾತಿ, ರೋಗಿಗಳ ನೋಂದಣಿ ಹಾಗೂ ಔಷಧ ದಾಸ್ತಾನುಗಳನ್ನು ಪರಿಶೀಲಿಸಿದರು. ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುವಂತೆ ಆಸ್ಪತ್ರೆಯ ಸಿಬ್ಬಂದಿಗೆ ಸೂಚನೆಗಳನ್ನು ನೀಡಿದರು. ಭೇಟಿ ಸಮಯದಲ್ಲಿ ಗುಳೇದಗುಡ್ಡ ಮತ್ತು ಬಾದಾಮಿ ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಿಕಾರ್ಜುನ ಬಡಿಗೇರ ಸೇರಿದಂತೆ ತಾ.ಪಂ ಸಹಾಯಕ ನಿರ್ದೇಶಕರಾದ ಸತೀಶ ಮಾಗೋಂಡ, ರಾಮಚಂದ್ರ ಮೈತ್ರಿ ಸೇರಿದಂತೆ ತಾಲೂಕ ಆರೋಗ್ಯಾಧಿಕಾರಿಗಳು, ಪಂಚಾಯತಅಭಿವೃದ್ಧಿಅಧಿಕಾರಿಗಳು,ತಾಂತ್ರಿಕ ಸಂಯೋಜಕರು, ಐ.ಇ.ಸಿ. ಸಂಯೋಜಕರು , ತಾಂತ್ರಿಕ ಸಹಾಯಕ ಅಭಿಯಂತರರು ಇದ್ದರು.

# ರಾಜ್ಯವನ್ನೇ ಬೆಚ್ಚಿ ಬೀಳಿಸಿದ ಘಟನೆ: ಮೋಟಾರ್ ಪೈಪ್ ಮೂಲಕ ಪೆಟ್ರೋಲ್ ಸುರಿದು ಮನೆಗೆ ಬೆಂಕಿ

## ಸಜೀವ ದಹನವಾದ ತಾಯಿ ಮಗಳು: ರನ್ನಬೆಳಗಲಿ ತೋಟದಲ್ಲಿ ಭೀಕರ ಕೃತ್ಯ | ತೀವ್ರ ಗಾಯಗೊಂಡ ಅಪ್ಪ ಮಗ: ಅದೃಷ್ಟವಶಾತ್ ಪಾರಾದ ಮೊಮ್ಮಗ






**ಮಹಾಲಿಂಗಪುರ :** ಸಿನಿಮಾ ಶೈಲಿಯಲ್ಲಿ ಮೋಟಾರ್ ಪೈಪ್ ಮೂಲಕ ಮನೆಗೆ ಬೆಂಕಿ ಹಚ್ಚಿದ ಪರಿಣಾಮ ತಂದೆ-ಮಗ ತೀವ್ರ ಗಾಯಗೊಂಡರೆ, ತಾಯಿ-ಮಗಳು ಸ್ಥಳದಲ್ಲೆ ಸಜೀವ ದಹನವಾದ ಭೀಕರ ಘಟನೆಯು ಮಂಗಳವಾರ ನಸುಕಿನ ಜಾವ 3 ಗಂಟೆಗೆ ಸುಮಾರಿಗೆ ಸಮೀಪದ ರನ್ನಬೆಳಗಲಿ(ತಾ. ಮುಧೋಳ) ಪಟ್ಟಣದ ವ್ಯಾಪ್ತಿಯ ಮಹಾಲಿಂಗಪುರ-ಅಕ್ಕಿಮರಡಿ ರಸ್ತೆಯ ಪೆಂಡಾರಿ ತೋಟದಲ್ಲಿ ಜರುಗಿದೆ. ಘಟನೆಯಲ್ಲಿ ತಂದೆ-ಮಗನಿಗೆ ತೀವ್ರಗಾಯಗೊಂಡು ಆಸ್ಪತ್ರೆಯಲ್ಲಿದ್ದರೇ, ಅದೃಷ್ಟ ವಶಾತ್ ಮೊಮ್ಮಗ ಪ್ರಾಣಾಪಾಯದಿಂದ ಪಾರಾಗಿದ್ದಾನೆ.

**ಘಟನೆಯ ವಿವರ :** ಸಮೀಪದ ರನ್ನಬೆಳಗಲಿ ಪಟ್ಟಣ ವ್ಯಾಪ್ತಿಯ ಪೆಂಡಾರಿ ತೋಟದ ವಸತಿಯ ನಿವಾಸಿಯಾದ ದಸ್ತಗೀರಸಾಬ ಮೌಲಾಸಾಬ ಪೆಂಡಾರಿ(64) ಅವರು ಹೆಂಡತಿ ಜೈಬಾನು ದಸ್ತಗೀರಸಾಬ ಪೆಂಡಾರಿ(55) ಮಗಳು ಶಬಾನಾ ಪೆಂಡಾರಿ, ಮಗ ಸುಭಾನ ಪೆಂಡಾರಿ, ಮೊಮ್ಮಗ ಸಿದ್ದಿಕ್ ಶೌಕತ್ ಪೆಂಡಾರಿ (ಮಗಳ ಮಗ) ಮನೆಯಲ್ಲಿ(ಪತ್ರಾಸ ಶೆಡ್ಡ) ಮಲಗಿರುವಾಗ, ಯಾರೋ ದುಷ್ಕರ್ಮಿಗಳು ಕುಟುಂಬದ ಸರ್ವ ಸದಸ್ಯರನ್ನು ಸಾಮೂಹಿಕವಾಗಿ ಕೊಲೆಮಾಡುವ ಉದ್ದೇಶದಿಂದ ಮನೆಯ ಬಾಗಿಲನ್ನು ಹೊರಗಿಂದ ಲಾಕ್ ಮಾಡಿ 200 ಲೀಟರ್ ಸಾಮರ್ಥ್ಯದ ಸಿಂಟ್ಯಾಕ್ಸ್(ನೀರಿನ ಟಾಂಕ್) ನಲ್ಲಿ ಪೆಟ್ರೋಲ್ ತುಂಬಿಸಿ 3 ಅಲ್ಲೆ ಇರುವ ಕಂಬದಿಂದ ವಿದ್ಯುತ್ ಸಂಪರ್ಕ ಪಡೆದು, ಎಚ್‌ಪಿ ಮೋಟಾರ್ ಹಚ್ಚಿ, ನೀರಿನ ಪೈಪ್ ಮೂಲಕ ಮನೆಯ ಸುತ್ತಲು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ.

ಪೆಟ್ರೋಲ್ ವಾಸನೆಗೆ ಎಚ್ಚರಗೊಂಡ 19 ವಯಸ್ಸಿನ ಮೊಮ್ಮಗ ಸಿದ್ದಿಕ್ ಶೌಕತ್ ಪೆಂಡಾರಿ(ಸಾ.ಕೊಲ್ಹಾಪುರ) ಮನೆಯ ಸದಸ್ಯರನ್ನುಎಬ್ಬಿಸಿದ್ದಾನೆ.ದಸ್ತಗೀರಸಾಬ ಮತ್ತು ಸುಭಾನ ಎಚ್ಚರಗೊಂಡು ಬಾಗಿಲು ತೆಗೆಯಲು ಪ್ರಯತ್ನಸಿದ್ದಾರೆ. ಬಾಗಿಲು ಹೊರಗಿನಿಂದ ಲಾಕ್ ಇರುವ ಕಾರಣ ಪಳಿಯನ್ನು ಮುರಿದು ಹೊರಬರಲು ಯತ್ನಿಸಿದ್ದಾರೆ. ಮೊಮ್ಮಗ ಸಿದ್ದಿಕ ಮೊದಲುಹೊರಗೆಬಂದಕಾರಣಆತಬೆಂಕಿಯ ಕೆನ್ನಾಲಿಗೆಯಿಂದ ಪಾರಾಗಿದ್ದಾನೆ. ತಂದೆ ಮಗ ಸುಟ್ಟುಕೊಂಡು ಪಾರಾಗಿದ್ದಾರೆ. ತಾಯಿಯನ್ನು ಎಬ್ಬಿಸಿಕೊಂಡು ಬರಲು ಪ್ರಯತ್ನಿಸಿದ ಮಗಳು ಶಬಾನಾ ದಸ್ತಗೀರಸಾಬ ಪೆಂಡಾರಿ(29) ಮತ್ತು ತಾಯಿ ಜೈಬಾನು ದಸ್ತಗೀರಸಾಬ ಪೆಂಡಾರಿ(55) ಇಬ್ಬರು ಬೆಂಕಿಯಲ್ಲಿ ಸಂಪೂರ್ಣ ಸುಟ್ಟು ಕರಕಲಾಗಿದ್ದಾರೆ ಎಂಬ ಮಾಹಿತಿಯು ಪೊಲೀಸರ ತನಿಖೆಯಿಂದ ತಿಳಿದು ಬಂದಿದೆ. ಈ ಕುರಿತು ಮುಧೋಳ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಬೆಚ್ಚಿ ಬೀಳಿಸಿದ ಭಯಾನಕ ಘಟನೆ :** ಮುಸ್ಲಿಂ ಸಮಾಜದ ಪವಿತ್ರ ಮೊಹರಂ ಹಬ್ಬದ ಮುನ್ನಾದಿನ ಮುಸ್ಲಿಂ ಕುಟುಂಬವೊಂದರ ಮೇಲೆ ನಡೆದ ಸಾಮೂಹಿಕ ಕೊಲೆ ಯತ್ನದ ಈ ಭೀಕರ ಘಟನೆಯು ಬಾಗಲಕೋಟೆ ಜಿಲ್ಲೆ ಸೇರಿದಂತೆ ಇಡಿ ರಾಜ್ಯವನ್ನೇ ತಲ್ಲಣಗೊಳಿಸಿದೆ. ಈ ಭಯಾನಕ ಘಟನೆಗೆ ಮೂಲ ಕಾರಣ ಏನೆಂದು ಪೊಲೀಸ್ ತನಿಖೆಯ ನಂತರವಷ್ಟೇ ತಿಳಿಯಬೇಕಾಗಿದೆ. ಕೊಲೆಗೆ ಯತ್ನಿಸಿದ ಯೋಜನಾ ರೀತಿಯನ್ನು ಕಂಡು ಸಾರ್ವಜನಿಕರು ಬೆಚ್ಚಿಬಿದ್ದಾರೆ.

**ಮುಗಿಲು ಮುಟ್ಟಿದ ಕುಟುಂಬಸ್ಥರ ಆಕ್ರಂದನ :** ಘಟನೆಯಲ್ಲಿ ಸಜೀವ ದಹನವಾದ ತಾಯಿ-ಮಗಳ ಮೃತದೇಹಗಳು ಕಟ್ಟಿಗೆಯನ್ನು ಸುಟ್ಟ ರೀತಿಯಲ್ಲಿ ಸಂಪೂರ್ಣ ಸುಟ್ಟು ಕರಕಲಾಗಿದ್ದು, ಇದು ಇವರದೇ ಮೃತದೇಹ ಎಂದು ಗುರುತಿಸಲಾಗದ ರೀತಿಯಲ್ಲಿ ಸುಟ್ಟಿರುವದನ್ನು ಕಂಡು ಹಾಗೂ ಘಟನೆಯನ್ನು ನೆನೆದು ಅವರ ಕುಟುಂಬಸ್ಥರ ಆಕ್ರಂದನವು ಮುಗಿಲು ಮುಟ್ಟಿತ್ತು.

**ಎಸ್‌ಪಿ ಭೇಟಿ :** ಘಟನೆಯ ವಿಷಯ ತಿಳಿಯುತ್ತಿದ್ದಂತೆ ಮಂಗಳವಾರ ಮುಂಜಾನೆ 7-30ಕ್ಕೆ ಘಟನಾ ಸ್ಥಳಕ್ಕೆ ಆಗಮಿಸಿದ ಬಾಗಲಕೋಟೆ ಎಸ್‌ಪಿ ಅಮರನಾಥರೆಡ್ಡಿ ತಮ್ಮ ಇಲಾಖೆಯ ತಂಡದೊಂದಿಗೆ ದಸ್ತಗೀರಸಾಬ ಪೆಂಡಾರಿ ಸಂಬಂಧಿಕರಿಂದ ಮಾಹಿತಿ ಮತ್ತು ಮಹಾಲಿಂಗಪುರ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳುಗಳಾದ ತಂದೆ ದಸ್ತಗೀರಸಾಬ, ಮಗ ಸುಭಾನ ಅವರಿಂದ ಹೇಳಿಕೆ ಪಡೆದುಕೊಂಡು, ಮುಧೋಳ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಸೀನಿಮಿಯ ಶೈಲಿಯಲ್ಲಿ ಕೊಲೆಗೆ ಯತ್ನಿಸಿದ ಆರೋಪಿಗಳ ಪತ್ತೆಗಾಗಿ 3-4 ತಂಡಗಳನ್ನು ರಚಿಸಿ ತನಿಖೆ ಮುಂದುವರೆಸಿದ್ದೇವೆ. ಅತಿ ಶೀಘ್ರದಲ್ಲೆ ಆರೋಪಿಗಳನ್ನು ಬಂಧಿಸಲಾಗುವದು ಎಂದು ತಿಳಿಸಿದ್ದಾರೆ.

**ಉತ್ತರ ವಲಯ ಆಯ್‌ಜಿಪಿ ಭೇಟಿ :** ತಾಯಿ ಮಗಳ ಸಜೀವ ದಹನ ಹಾಗೂ ತಂದೆ ಮಗ ಗಾಯಾಳುಗಳಾದ ಭೀಕರ ಘಟನೆಯ ನಡೆಯುತ್ತಿದ್ದಂತೆ ಬೆಳಗಾವಿಯ ಉತ್ತರ ವಲಯ ಆಯ್‌ಜಿಪಿ ವಿಕಾಸ ಕುಮಾರ್ ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರ ಮಹಾಲಿಂಗಪುರ ಪೊಲೀಸ್ ಠಾಣೆಗೆ ಭೇಟಿ ನೀಡಿ, ಬಾಗಲಕೋಟೆ ಎಸ್‌ಪಿ ಅಮರನಾಥರೆಡ್ಡಿ ಹಾಗೂ ಜಮಖಂಡಿ ಡಿವೈಎಸ್‌ಪಿ ಈ ಶಾಂತವೀರ ಅವರಿಂದ ಘಟನೆಯ ಮಾಹಿತಿ ಪಡೆದುಕೊಂಡರು.

**ಆಯ್‌ಜಿಪಿ ಅವರ ಹೇಳಿಕೆ :** ಮಹಾಲಿಂಗಪುರ ಪೊಲೀಸ್ ಠಾಣೆಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಸದರಿ ಘಟನಾ ಸ್ಥಳವನ್ನು ಪರಿಶೀಲಿಸಿದಾಗ ಕುಟುಂಬದ ಸರ್ವ ಸದಸ್ಯರನ್ನು ಕೊಲೆ ಮಾಡುವ ಉದ್ದೇಶದಿಂದ ದುಷ್ಕರ್ಮಿಗಳು ವ್ಯವಸ್ಥಿತ ಯೋಜನೆಯನ್ನು ಹಾಕಿ, ಮೋಟಾರ್ ಪೈಪ್ ಮೂಲಕ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ. ಕೃತ್ಯಕ್ಕೆ ಬಳಸಿರುವ ಸಿಂಟ್ಯಾಕ್ಸ್, ಮೋಟಾರ್, ಪೈಪ್ ಸೇರಿದಂತೆ ವಸ್ತುಗಳನ್ನು ನೋಡಿದರೆ ಕನಿಷ್ಠ 4-5 ಜನರು ಭಾಗಿಯಾಗಿ ಈ ಕೃತ್ಯ ಭಾಗಿಯಾಗಿದ್ದಾರೆ ಅನಿಸುತ್ತಿದೆ. ಮೇಲ್ನೋಟಕ್ಕೆ ಕುಟುಂಬದ ಆಂತರಿಕ ಹಾಗೂ ವಯಕ್ತಿಕ ದ್ವೇಷದಿಂದ ಘಟನೆ ನಡೆದಿರಬಹುದು ಎಂಬ ಸಂಶಯ ಕಂಡು ಬಂದಿದೆ. ಬಾಗಲಕೋಟೆ ಎಸ್‌ಪಿ ಅಮರನಾಥರೆಡ್ಡಿ ನೇತೃತ್ವದಲ್ಲಿ 5 ತಂಡಗಳನ್ನು ರಚಿಸಿ, ಬೇರೆ ಬೇರೆ ಆಯಾಮಗಳಲ್ಲಿ ಕೇಸಿನ ತನಿಖೆ ಕೈಗೊಳ್ಳಲಾಗುತ್ತಿದೆ. ಕೇಸಿನ ಸಂಪೂರ್ಣ ತನಿಖೆನಂತರಕೊಲೆಯಉದ್ದೇಶತಿಳಿಯಲಿದೆ. ಶೀಘ್ರದಲ್ಲೆ ಆರೋಪಿಗಳನ್ನು ಬಂಧಿಸಲು ನಮ್ಮ ಇಲಾಖೆಯು ಬಿರುಸಿನ ಕಾರ್ಯಚರಣೆಯಲ್ಲಿ ತೊಡಗಿದೆ ಎಂದರು.

**ಅಗ್ನಿಶಾಮಕ ವಾಹನ ಬರಲು ಸ್ಥಳ ಇರಲಿಲ್ಲ :** ಮನೆಯ ಬೆಂಕಿಯನ್ನು ನಂದಿಸಲು ರಬಕವಿ-ಬನಹಟ್ಟಿಯ ಅಗ್ನಿಶಾಮಕ ವಾಹನ ಬಂದಿದ್ದರು ಸಹ, ತೋಟದ ಮನೆಯು ಮುಖ್ಯರಸ್ತೆಯಿಂದ ಅಂದಾಜು1ಕೀಮಿಗಿಂದ ಇಕ್ಕಟಾದ ಜಾಗೆಯಲ್ಲಿ ಇರುವ ಕಾರಣ ಅಗ್ನಿಶಾಮಕ ವಾಹನವು ಘಟನಾ ಸ್ಥಳಕ್ಕೆ ಬರಲು ಸಾಧ್ಯವಾಗಲಿಲ್ಲ.

**ಎಫ್‌ಎಲ್‌ಎಲ್ ಹಾಗೂ ಶ್ವಾನದಳ ಭೇಟಿ :** ಬಾಗಲಕೋಟೆಯ ಎಫ್‌ಎಸ್‌ಎಲ್ ತಂಡ ಹಾಗೂ ಶ್ವಾನದಳದ ಅಧಿಕಾರಿಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿ ಆರೋಪಿಗಳ ಪತ್ತೆಗಾಗಿ ತನಿಖೆ ಕೈಗೊಂಡರು. ಬಾಗಲಕೋಟೆ ಜಿಲ್ಲೆಯ ಹೆಚ್ಚುವರಿ ಎಸ್‌ಪಿ ಮಹಾಂತೇಶ್ವರ ಜಿದ್ದಿ, ಜಮಖಂಡಿ ಡಿವೈಎಸ್‌ಪಿ ಈ.ಶಾಂತವೀರ, ಬನಹಟ್ಟಿ ಸಿಪಿಆಯ್ ಸಂಜೀವ ಬಳಗಾರ, ಎಸೈ ಶಾಂತಾ ಹಳ್ಳಿ, ಕ್ರೈಂ ವಿಭಾಗದ ಎಸೈ ವಿಜಯ ಕಾಂಬಳೆ, ಸ್ಥಳೀಯ ಠಾಣಾಧಿಕಾರಿ ಪ್ರವೀಣ ಬೀಳಗಿ, ಮುಧೋಳ ಸಿಪಿಆಯ್, ಪಿಎಸ್‌ಆಯ್ ಸೇರಿದಂತೆ ಜಮಖಂಡಿ ಉಪ ವಿಭಾಗದಲ್ಲಿನ ಎಲ್ಲಾ ಠಾಣೆಯ ಅಧಿಕಾರಿಗಳು ಮಹಾಲಿಂಗಪುರದಲ್ಲಿಯೇ ಬೀಡುಬಿಟ್ಟು ತನಿಖೆ ಮುಂದುವರೆಸಿದ್ದಾರೆ.

**ಸುಭಾನ ಬೆಳಗಾವಿ ಆಸ್ಪತ್ರೆಗೆ ದಾಖಲು :** ಘಟನೆಯಲ್ಲಿ ತೀವ್ರಗಾಯಗೊಂಡಿರುವ ಸುಭಾನ ದಸ್ತಗೀರಸಾಬ ಪೆಂಡಾರಿ(27) ಸ್ಥಳಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು. ತೀವ್ರ ಗಾಯಾಳಾವಾದ ಕಾರಣ ಮಧ್ಯಾಹ್ನ ಹೆಚ್ಚಿನ ಚಿಕಿತ್ಸೆಗಾಗಿ ಅಂಬ್ಯೂಲೆನ್ಸ್‌ನಲ್ಲಿ ಬೆಳಗಾವಿಯ ಸಿವ್ಹಿಲ್ ಆಸ್ಪತ್ರೆಗೆ ಕಳಿಸಲಾಯಿತು. ಶೇ.75ಕ್ಕಿಂತ ಹೆಚ್ಚು ಗಾಯಾಳು ಆದ ಕಾರಣ ಉಳಿಯುವದು ಅಸಾಧ್ಯ ಎನ್ನಲಾಗುತ್ತಿದೆ.

# ತಾಯಿ-ಮಗಳ ಸಜೀವ ದಹನ ಪ್ರಕರಣ: ಆರೋಪಿಗಳ ಪತ್ತೇಗಾಗಿ 8 ತಂಡಗಳಿಂದ ಬಿರುಸಿನ ಕಾರ್ಯಾಚರಣೆ

**ಮಹಾಲಿಂಗಪುರ :** ಮಂಗಳವಾರ ನಸುಕಿನ ಜಾವ ನೆರೆಯ ರನ್ನಬೆಳಗಲಿ ಪಟ್ಟಣದ ವ್ಯಾಪ್ತಿಯಲ್ಲಿ ಜರುಗಿದ ಪೆಟ್ರೋಲ್ ಸುರಿದು ಮನೆಗೆ ಬೆಂಕಿ-ತಾಯಿ ಮಗಳ ಸಜೀವ ದಹನ ಪ್ರಕರಣದಲ್ಲಿ ಭಾಗಿಯಾದ ದುಷ್ಕರ್ಮಿಗಳ ಪತ್ತೇಗಾಗಿ ಬೆಳಗಾವಿಯ ಐಜಿಪಿ ವಿಕಾಸ ಕುಮಾರ್, ಬಾಗಲಕೋಟೆ ಎಸ್‌ಪಿ ಅಮರನಾಥರೆಡ್ಡಿ ಮಾರ್ಗದರ್ಶನದಲ್ಲಿ ಜಮಖಂಡಿ ಡಿವೈಎಸ್‌ಪಿ ನೇತೃತ್ವದ 8 ತಂಡಗಳು ಮಂಗಳವಾರದಿಂದ ಸಕ್ರೀಯ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿವೆ.

ಬುಧವಾರಸಂಜೆವರೆಗೂಆರೋಪಿಗಳಪತ್ತೇಯಾಗಿಲ್ಲ.ಆದರೆಮೊಹರಂ ಹಬ್ಬದ ನಡುವೆಯೂ ಪೊಲೀಸ್ ಅಧಿಕಾರಿಗಳು ಕೇಸಿನ ವಿಚಾರಣೆಯಲ್ಲಿ ತೊಡಗಿದ್ದಾರೆ. ಜಮಖಂಡಿ ಡಿವೈಎಸ್‌ಪಿ ಈ.ಶಾಂತವೀರ ನೇತೃತ್ವದಲ್ಲಿ ಮುಧೋಳ ಸಿಪಿಆಯ್ ಶಿರಹಟ್ಟಿ, ಬನಹಟ್ಟಿ ಸಿಪಿಆಯ್ ಸಂಜೀವ ಬಳಗಾರ, ಮುಧೋಳ ಎಸೈ ಅಜೀತ ಹೊಸಮನಿ, ಮಹಾಲಿಂಗಪುರ ಎಸೈ ಪ್ರವೀಣ ಬೀಳಗಿ ಅವರನ್ನು ಒಳಗೊಂಡಂತೆ 8 ತಂಡಗಳು ಹಲವಾರು ಆಯಾಮಗಳಲ್ಲಿ ಪ್ರಕರಣದ ಆರೋಪಿಗಳ ಪತ್ತೇಗಾಗಿ ತೀವ್ರ ಕಾರ್ಯಾಚರಣೆ ಮುಂದುವರೆಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಸಂಶಯಾಸ್ಪದವಾಗಿ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಶೀಘ್ರದಲ್ಲೆ ಆರೋಪಿಗಳನ್ನು ಬಂಧಿಸಲಾಗುತ್ತದೆ ಎಂಬ ಮಾಹಿತಿ ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.

**ಸ್ಥಳೀಯ ಠಾಣೆಯಲ್ಲಿಯೇ ವಿಚಾರಣೆ :** ಘಟನೆ ನಡೆದ ಸ್ಥಳವು ನೆರೆಯ ರನ್ನಬೆಳಗಲಿ ಪಟ್ಟಣದ ವ್ಯಾಪ್ತಿಯಲ್ಲಿ ಜರುಗಿದೆ. ಮುಧೋಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆದರೆ ಘಟನಾ ಸ್ಥಳವು ಮಹಾಲಿಂಗಪುರ ಠಾಣೆಗೆ ಸಮೀಪವಿದ್ದ ಕಾರಣ ಸ್ಥಳೀಯ ಠಾಣೆಯಲ್ಲಿಯೇ ಪ್ರಕರಣದ ಸಂಪೂರ್ಣ ವಿಚಾರಣೆ ನಡೆಯುತ್ತಿದೆ. ಜಮಖಂಡಿ, ತೇರದಾಳ, ಬನಹಟ್ಟಿ, ಮುಧೋಳ ಭಾಗದ ಅಧಿಕಾರಿಗಳು ಮತ್ತು ಪೊಲೀಸ್ ಸಿಬ್ಬಂದಿ ಮಹಾಲಿಂಗಪುರದಲ್ಲಿಯೇ ಇದ್ದು ಆರೋಪಿಗಳ ಬಂಧನಕ್ಕಾಗಿ ಹಗಲಿರುಳು ಶ್ರಮಿಸುತ್ತಿದೆ.



**ತಂದೆ ಗುಣಮುಖ :** ಪ್ರಕರಣದಲ್ಲಿ ಸುಟ್ಟುಗಾಯಗಳಾಗಿ ಬದುಕಿ ಉಳಿದ ದಸ್ತಗೀರಸಾಬ ಪೆಂಡಾರಿ ಮಹಾಲಿಂಗಪುರ ಪಟ್ಟಣದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರಿಗೆ ಗಂಭೀರ ಸ್ವರೂಪದ ಗಾಯವಾಗದೇ ಇರುವದರಿಂದ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ. ಶೀಘ್ರದಲ್ಲೆ ಗುಣಮುಖರಾಗುತ್ತಾರೆ ಎಂಬ ಮಾಹಿತಿ ಇದೆ.

**ಮಗನ ಸ್ಥಿತಿ ಗಂಭೀರ? :** ಪೆಟ್ರೋಲ್ ಸುರಿದು ಮನೆಗೆ ಬೆಂಕಿ ಘಟನೆಯಲ್ಲಿ ಶೇ.75ಕ್ಕಿಂತ ಹೆಚ್ಚಿಗೆ ಗಾಯಾಳು ಆಗಿರುವ ದಸ್ತಗೀರಸಾಬ ಅವರ ಮಗ ಸುಭಾನ ಪೆಂಡಾರಿ ಅವರನ್ನು ಮಂಗಳವಾರ ಮಧ್ಯಾಹ್ನವೇ ಬೆಳಗಾವಿಯ ಸಿವ್ಹಿಲ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಬುಧವಾರ ಮಧ್ಯಾಹ್ನ ಗಾಯಾಳು ಸುಭಾನ ಪೆಂಡಾರಿ ಅವರು ಚಿಕಿತ್ಸೆಗೆ ಸ್ಪಂದಿಸದೇ, ಆರೋಗ್ಯ ಸ್ಥಿತಿಯು ಗಂಭೀರವಾದ್ದರಿಂದ ಬೆಳಗಾವಿಯ ಕೆಎಲ್‌ಇ(ಪ್ರಸಿದ್ದ ಖಾಸಗಿ) ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಪುತ್ರ ಸುಭಾನ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ದಸ್ತಗೀರಸಾಬ ಪೆಂಡಾರಿ ಅವರ ಕುಟುಂಬ ಮೂಲಗಳಿಂದ ತಿಳಿದು ಬಂದಿದೆ.

# ಚಿಣ್ಣರ ದಿಂಡಿ ಉತ್ಸವ



**ರಬಕವಿ :** ಆಷಾಢ ಏಕಾದಶಿ ನಿಮಿತ್ಯ ಬಸವ ಎಜ್ಯುಕೇಶನ್ ಫೌಂಡೇಶನ್, ವೀರಪ್ಪ ಮಾನ್ವಿ ಪೂರ್ವ ಪ್ರಾಥಮಿಕ್ ಶಾಲೆ ಮತ್ತು ಶ್ರೀ ಡಿ. ಕೆ. ಕೊಟ್ರಶೆಟ್ಟಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ "ಬಾಲ ಸಂತರ ದಿಂಡಿ ಉತ್ಸವ"ವು ವೀರಪ್ಪ ಮಾನ್ವಿ ಶಾಲೆಯಿಂದ ಹರಿಮಂದಿರ ವರೆಗೆ ಅತೀ ವಿಜೃಂಭಣೆಯಿಂದ ನಡೆಯಿತು. ಉತ್ಸವದಲ್ಲಿ ವೀರಪ್ಪ ಮಾನ್ವಿ ಶಾಲೆಯ ಎಲ್ಲ ಸಿಬ್ಬಂದಿ, ಭಾರತ್ ಗ್ಯಾಸ ಸಿಬ್ಬಂದಿ,ಬಸವ ಎಜ್ಯಕೇಶನ್ ಫೌಂಡೇಶನ್ನಿನ ನಿರ್ದೇಶಕರಾದ ಡಾ. ಜಿ. ಎಚ್. ಚಿತ್ತರಗಿ, ವಿಜಯ ನಾಶಿ, ಅಮಿತ್ ನಾಶಿ, ಡಿ.ಕೆ. ಕೊಟ್ರಶೆಟ್ಟಿ ಫೌಂಡೇಶನ್ ಅಧ್ಯಕ್ಷ ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ ಮತ್ತು ಶಾಲೆಯ ಎಲ್ಲ ಮುದ್ದು ಮಕ್ಕಳು ಪಾಲ್ಗೊಂಡಿದ್ದರು. ಶ್ರೀ ಹರಿಮಂದಿರದಲ್ಲಿ ಅಲ್ಪೋಪಹಾರದೊಂದಿಗೆ ಸಮಾರೋಪಗೊಂಡಿತು.

# ಸಾಧಕರಿಗೆ ಪ್ರೋತ್ಸಾಹ ನೀಡಿದಾಗ ಸಾಧನೆಗೆ ಮೆರಗು



**ರಬಕವಿ :** ಸಮಾಜದಲ್ಲಿ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ, ಗೌರವಿಸಿ, ಪ್ರೋತ್ಸಾಹಿಸಿದಾಗ ಅವರ ಪ್ರತಿಭೆಗೆ ಮೆರಗು ಬರುತ್ತದೆ ಎಂದು ರಬಕವಿ ಪಿಕೆಪಿಎಸ್ ಅಧ್ಯಕ್ಷ ಧರೆಪ್ಪ ಉಳ್ಳಾಗಡ್ಡಿ ಹೇಳಿದರು. ಅವರು ರಬಕವಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ (ದಕ್ಷಿಣ ವಲಯ) ಕಾರ್ಯಾಲಯದಲ್ಲಿ ಸಿ. ಎ. ಪರಿಕ್ಷೆಯಲ್ಲಿ ತೇರ್ಗಡೆ ಹೊಂದಿದ ಬನಹಟ್ಟಿಯ ನಾಗೇಶ ಶ್ರೀಶೈಲ ಸುಂಕದ ಅವರನ್ನು ಸನ್ಮಾನಿಸಿ ಮಾತನಾಡಿದರು. ನಮ್ಮ ಮಧ್ಯದಲ್ಲಿ ಸಾಕಷ್ಟು ಪ್ರತಿಭೆಗಳು ಇರುತ್ತವೆ. ಅಂತಹ ಪ್ರತಿಭೆಗಳನ್ನು ಗುರುತಿಸಿ ಗೌರವಿಸಿದಾಗ ಅವರ ಭವಿಷ್ಯ ಉಜ್ವಲವಾಗುತ್ತದೆ. ಸಾಧಕರ ಸಾಧನೆಗಳು ಅವರ ಯಶಸ್ಸಿನ ಯಶೋಗಾಥೆ ಮತ್ತು ಅವರು ಉನ್ನತ ಸ್ಥಾನಕ್ಕೆ ಏರುವಾಗ ಪಟ್ಟ ಕಠಿಣ ಶ್ರಮ ಇವೆಲ್ಲವೂ ಇಂದಿನ ಯುವಕ ಯುವತಿಯರಿಗೆ ದಾರಿದೀಪವಾಗಲಿವೆ ಎಂದರು.

ಈ ಸಂದರ್ಭದಲ್ಲಿ ಶ್ರೀಶೈಲ ದಲಾಲ, ಮಹಾದೇವ ದೂಪದಾಳ, ಪರಪ್ಪ ಪೂಜಾರಿ, ಬಾಬು ಮಹಾಜನ, ಸಾತಪ್ಪ ಬಾಗಿ, ಬಸಪ್ಪ ಮಲ್ಲೋಡಿ, ರಾಜು ಮುಶ್ಯಪ್ಪಗೋಳ, ಸದಾಶಿವ ನಾಯಕ, ಬಿಡಿಸಿಸಿ ಬ್ಯಾಂಕಿನ ಕ್ಷೇತ್ರ ಸಿಬ್ಬಂದಿಗಳಾದ ಶಿವಾನಂದ ಪಾಟೀಲ, ಮುಖ್ಯ ಕಾರ್ಯನಿರ್ವಾಹಕರಾದ ಸದಾಶಿವ ಚಿಂಚಲಿ, ಅಮೋಘಸಿದ್ದ ಶಿರೋಳ, ಬಸವರಾಜ ಕರಿಜಾಡರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಹಿಪ್ಪರಗಿ ಜಲಾಶಯಕ್ಕೆ 75,460 ಕ್ಯೂಸೆಕ್ ನೀರು



**ರಬಕವಿ-ಬನಹಟ್ಟಿ :** ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶಗಳಲ್ಲಿ ಮಳೆಯಾಗುತ್ತಿರುವುದರಿಂದ ಸಮೀಪದ ಕೃಷ್ಣಾನದಿ ತುಂಬಿ ಹರಿಯುತ್ತಿದ್ದು , ಸಮೀಪದ ಹಿಪ್ಪರಗಿ ಜಲಾಶಯಕ್ಕೆ ಬುಧವಾರ 75,460 ಕ್ಯೂಸೆಕ್ಸ್ ನೀರು ಹರಿದು ಬರುತ್ತಿದೆ.

ಮಹಾರಾಷ್ಟ್ರದ ರಾಜಾಪೂರ ಜಲಾಶಯದಿಂದ ನೀರು ಭಾರಿ ಪ್ರಮಾಣದಲ್ಲಿ ಕೃಷ್ಣಾ ನದಿಗೆ ಹರಿದು ಬರುತ್ತಿದ್ದು, ಕಳೆದ ಕೆಲವು ದಿನಗಳಿಂದ ಉತ್ತಮ ಪ್ರಮಾಣದ ನೀರು ಹರಿದು ಬಂದಿದೆ. ದಿನದಿಂದ ದಿನಕ್ಕೆ ನೀರಿನ ಮಟ್ಟ ಹೆಚ್ಚಳವಾಗುತ್ತಾ ನಡೆದಿದೆ.

ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶಗಳಾದ ಕೊಯ್ನಾ 11 ಮಿ.ಮೀ., ನೌಜಾ 19 ಮಿ.ಮೀ., ಮಹಾಬಳೇಶ್ವರ 35 ಮಿ.ಮೀ., ವಾರಣಾ 13 ಮಿ.ಮೀ., ರಾಧಾನಗರಿ 44 ಮಿ.ಮೀ., ದೂಧಗಂಗಾ 20 ಮಿ.ಮೀ. ಮಳೆಯಾಗಿರುವುದರಿಂದ ಹಿಪ್ಪರಗಿ ಜಲಾಶಯಕ್ಕೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದೆ. ಇಂದು ಬುಧವಾರ ಹಿಪ್ಪರಗಿ ಜಲಾಶಯಕ್ಕೆ ಒಟ್ಟು 75,460 ಕ್ಯೂಸೆಕ್ಸ ನೀರು ಹರಿದು ಬರುತ್ತಿದ್ದು, 76,988 ಕ್ಯೂಸೆಕ್ಸ್ ನೀರನ್ನು ಮುಂದೆ ಹರಿ ಬಿಡಲಾಗುತ್ತಿದೆ. ಆರು ಟಿಎಂಸಿ ಸಾಮರ್ಥ್ಯದ ಹಿಪ್ಪರಗಿ ಜಲಾಶಯದಲ್ಲಿ ಸಧ್ಯ 2.84 ಟಿಎಂಸಿ ನೀರು ಸಂಗ್ರಹವಿದ್ದು, ನೀರಿನ ಮಟ್ಟ 521.25 ಮೀ. ಇದೆ ಎಂದು ಜಮಖಂಡಿ ವಲಯದ ಕಂದಾಯ ಉಪವಿಭಾಗಾಧಿಕಾರಿ ಕುಮಾರಿ. ಶ್ವೇತಾ ಬೀಡಕರ ತಿಳಿಸಿದ್ದಾರೆ.

# ಹಿಂದೂ-ಮುಸ್ಲಿಂ ಭಾವೈಕ್ಯತೆಗೆ ಸಾಕ್ಷಿಯಾದ ಮಹಾಲಿಂಗಪುರ ಮೊಹರಂ ಹಬ್ಬ



**ಮಹಾಲಿಂಗಪುರ :** ಮೋಹರಂ ಹಬ್ಬವನ್ನು ಪಟ್ಟಣದ ಹಿಂದೂ-ಮುಸ್ಲಿಂ ಬಾಂಧವರು ಬುಧವಾರ ಕೊನೆಯ ದಿವಸ ವಿಜೃಂಭಣೆಯಿಂದ ಆಚರಿಸಿದರು. ಮಹಾಲಿಂಗಪುರದಲ್ಲಿ ಪ್ರತಿವರ್ಷ ನಡೆಯುವ ಮೊಹರಂ ಹಬ್ಬವು ಹಿಂದೂ-ಮುಸ್ಲಿಂ ಭಾವೈಕ್ಯತೆಗೆ ಸಾಕ್ಷಿಯಾಗಿದೆ.

ಒಟ್ಟು ಹತ್ತು ದಿನಗಳ ಆಚರಣೆ ಇದಾಗಿದ್ದು, ಇಸ್ಲಾಂ ಧರ್ಮದ ಹೊಸ ವರ್ಷವೂ ಆರಂಭಗೊಳ್ಳುತ್ತದೆ. ಮೊದಲ ದಿವಸ ಗುದ್ದಲಿ ಹಾಕಿ, ಐದು ದಿವಸಗಳ ನಂತರ ಪಟ್ಟಣದ ಏಳು ಕಡೆಗಳಲ್ಲಿ ಲಾಲಸಾಬಲಿ, ಮೌಲಾಲಿ, ಹಸನ್-ಹುಸೇನ್ ಎಂಬ ಪಂಜೆಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಈ ಪಂಜೆಗಳಿಗೆ ಭಕ್ತರು ನೀಡಿದ ಬಣ್ಣ ಬಣ್ಣದ ಬಟ್ಟೆಗಳನ್ನು ತೊಡಿಸಿ, ನಾಣ್ಯಗಳ ಪುತ್ಥಳಿ ಸರಗಳನ್ನು ತೊಡಿಸಿ ಜನತೆಯಲ್ಲಿ ದೈವತ್ವದ ಭಾವ ಪ್ರಕಟಗೊಳ್ಳುವಂತೆ ಶೃಂಗಾರಗೊಳಿಸಲಾಗಿತ್ತು.

**ಸಂಪ್ರದಾಯ :** ಐದು ದಿವಸಗಳಲ್ಲಿ ಎಲ್ಲ ಸಮೂದಾಯಗಳ ಭಕ್ತರು ಈ ಪಂಜೆಗಳಿಗೆ ಸಿಹಿ ಖಾದ್ಯ ಚೋಂಗೆ ಸಹಿತ ಬಗೆ ಬಗೆಯ ನೈವೇದ್ಯಗಳನ್ನು ಪಂಜೆ ಇರುವೆಡೆಗೆ ತಂದು ಸಮರ್ಪಿಸಿ, ಮನೆಗಳಲ್ಲಿರುವ ಸದಸ್ಯರೆಲ್ಲರೂ ಕೈಗೆ ಕೆಂಪು ದಾರ (ಲಾಡಿ) ಕಟ್ಟಿಕೊಂಡು ದೇವರು ಹೊಳೆಗೆ ಹೋಗುವ ಕೊನೆ ದಿವಸಗಳವರೆಗೆ ಪಕೀರ್ ಆಗಿ ತಮ್ಮ ಪೂರ್ವಜರ ಸಂಪ್ರದಾಯ ಆಚರಿಸಿದರು.

**ಭಕ್ತರ ಮನೆಗಳಿಗೆ ಭೇಟಿ :** ಪಂಜೆಗಳು ಈ ಐದು ದಿವಸಗಳಲ್ಲಿ ಮೂರು ಬಾರಿ ಪಟ್ಟಣದ ಪ್ರತಿ ಭಕ್ತರ ಮನೆಗೆ ಭೇಟಿ ನೀಡಿ ಭೂತ, ಭವಿಷ್ಯತ್ ಹಾಗೂ ವರ್ತಮಾನ ಕಾಲದ ಬಗ್ಗೆ ಉಭಯ ಕುಶಲೋಪರಿ ನಡೆಸಿ ಭಕ್ತರಲ್ಲಿ ಧನ್ಯತಾಭಾವ ಮೂಡಿಸಿದವು. ಬೇಡಿಕೊಂಡಂತೆ ಬರುವ ವರ್ಷ ಪರಿವಾರದಲ್ಲಿ ಇಷ್ಟಾರ್ಥವೇನಾದರು ಸಿದ್ಧಿಸಿದರೆ ಹರಕೆಯ ವಸ್ತುಗಳನ್ನು ಪಂಜೆಗಳಿಗೆ ತೊಡಿಸುತ್ತಾರೆ.

**ಮೆರವಣಿಗೆ :** ಕೊನೆಯ ದಿವಸ ಬುಧವಾರ ಮುಂಜಾನೆ ಎಲ್ಲ ಪಂಜೆಗಳು ಭಕ್ತರ ಮನೆಗಳಿಗೆ ಭೇಟಿ ನೀಡಿ ನಡುಚೌಕಿ ಪ್ರದೇಶದಲ್ಲಿ ಬಣ್ಣ ಬಣ್ಣದ ಆಕರ್ಷಕ ತಾಬೂತ್ (ಡೋಲಿ) ಗಳ ಜೊತೆಯಲ್ಲಿ ಸೇರಿ, ಮಹಾಲಿಂಗಪುರದ ಐತಿಹಾಸಿಕ ಮಹಾಲಿಂಗೇಶ್ವರ ದೇವಸ್ಥಾನದ ಕಡೆಗೆ ಹೆಜ್ಜೆ ಹಾಕಿದಾಗ, ಸಕಲ ವಾದ್ಯ ವೃಂದಗಳು ತಮ್ಮ ಸಂಗೀತ ನೀನಾದದಿಂದ ಮೋಹರಂ ಮೆರವಣಿಗೆಯ ಮೆರಗು ಹೆಚ್ಚಿಸಿತ್ತು.

**ಶ್ರೀಮಠದಿಂದ ಪೂಜೆ :** ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಆಗಮಿಸಿದ ಪಂಜೆಗಳಿಗೆ ಮಠದ ಪೀಠಾಧಿಪತಿ ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳು ಪೂಜೆ ನೆರವೇರಿಸಿ ಊದ ಹಾಕಿದರು. ಪ್ರತಿವರ್ಷ ಮೊಹರಂ ಕೊನೆಯ ದಿನ ಪಂಜೆಗಳು ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಬಂದು ಪೂಜೆ ಸಲ್ಲಿಸುವದು ಪಟ್ಟಣದ ವಾಡಿಕೆಯಾಗಿದ್ದು. ಇದು ಇಲ್ಲಿನ ಹಿಂದೂ-ಮುಸ್ಲಿಂ ಭಾವೈಕ್ಯತೆಗೆ ಸಾಕ್ಷಿಯಾಗಿದೆ.

**ಬಸವ ತೀರ್ಥಕ್ಕೆ ಪಂಜೆಗಳು :** ಸಂಜೆ ಮತ್ತೆ ವಾಡಿಕೆಯಂತೆ ದೇವಸ್ಥಾನಕ್ಕೂ ಮತ್ತು ಗೌಡರ ಮನೆಗೆ ಭೇಟಿ ನೀಡಿ ನೇರವಾಗಿ ಅಪ್ಪನವರ ಬಸವತೀರ್ಥಕ್ಕೆ ಆಗಮಿಸಿ ಕೊನೆಯದಾಗಿ ಪಂಜೆಗಳು ಬಸವ ತೀರ್ಥದಲ್ಲಿ ಮಿಂದೆದ್ದು ಮೋಹರಂ ಹಬ್ಬಕ್ಕೆ ಇತಿಶ್ರೀ ಹಾಡಿದವು. ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿ ಬಂದ ಡೋಲಿಗಳಿಗೆ ಜನರು ಖರ್ಜೂರ ಎಸೆದು ತಮ್ಮ ಭಕ್ತಿ ಸಮರ್ಪಿಸಿದರು.

# ಗಮನ ಸೆಳೆದ ರಿವಾಯತ್ ಪದಗಳು



**ಬನಹಟ್ಟಿ :** ನಗರದಲ್ಲಿ ಬುಧವಾರ ಮೊಹರಂ ಹಬ್ಬವನ್ನು ಶ್ರದ್ಧೆ ಮತ್ತು ಭಕ್ತಿಯಿಂದ ಆಚರಣೆ ಮಾಡಲಾಯಿತು.

ಬನಹಟ್ಟಿಯ ಹಳೇ ಗ್ರಂಥಾಲಯದ ಹತ್ತಿರ ನಗರದ ಎಲ್ಲ ಡೋಲಿಗಳನ್ನು ತೆಗೆದುಕೊಂಡು ಬಂದು ಪ್ರತಿಷ್ಠಾಪಿಸಲಾಗಿತ್ತು.

ರಫಿಕ್ ಹನಗಂಡಿ, ಸಲೀಂ ಹನಗಂಡಿ, ಬಾಬುಲಾಲ್ ಹನಗಂಡಿ,

ಸಾಧಿಕ್ ಮುಜಾವರ್, ಮುರಾನಸಾಬ್ ಹನಗಂಡಿ ಸೇರಿದಂತೆ ಚಿಕ್ಕ ಮಕ್ಕಳು ರಿವಾಯತ್ ಪದಗಳನ್ನು ಹಾಡಿದರು.

ಬೆಳಿಗ್ಗೆ ಏಳಕ್ಕೆ ಡೋಲಿಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಒಂಭತ್ತು ಗಂಟೆಯವರೆಗೆ ಹಲವಾರು ತಂಡದವರು ರಿವಾಯತ್ ಪದಗಳನ್ನು ಹಾಡಿದರು.

ಮಕ್ಕಳು, ಮಹಿಳೆಯರು ಮತ್ತು ಹಿರಿಯರು ಪದಗಳನ್ನು ಕೇಳಲು ವೀರಭದ್ರೇಶ್ವರ ದೇವಸ್ಥಾನದ ಬೀದಿಯಲ್ಲಿ ಸೇರಿದ್ದರು.

ನಗರದಲ್ಲಿ ಸ್ಥಾಪನೆ ಮಾಡಲಾದ ಡೋಲಿಗಳಿಗೆ ಮುಸ್ಲಿಮ್‌ರು ಸೇರಿದಂತೆ ಬಹಳಷ್ಟು ಹಿಂದೂ ಮಹಿಳೆಯರು ಡೋಲಿಗಳಿಗೆ ನೈವೇದ್ಯ ಸಲ್ಲಿಸಿದರು.

# ವನಮಹೋತ್ಸವಕ್ಕೆ ಚಾಲನೆ



**ಬಂಕಾಪುರ :** ಪರಿಸರ ಸಂರಕ್ಷಣೆ ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾದಾಗ ಸಮೃದ್ಧ ಮಳೆ ಬಂದು ಉತ್ತಮ ಫಸಲು ಬರಲು ಸಾಧ್ಯವಿದೆ. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳುಒಂದೊಂದುಸಸಿನೆಟ್ಟುವಾಸಿಸುವಂತೆ ಹಾವೇರಿಯ ಹೊಸಮಠದ ಶ್ರೀ ಬಸವ ಶಾಂತಲಿಂಗ ಸ್ವಾಮೀಜಿ ಹೇಳಿದರು.

ಸಮೀಪದ ಕೊಂದೂರು ಗ್ರಾಮದ ಶ್ರೀ ರುದ್ರೇಶ್ವರ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ನಡೆದ ವನಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀಗಳು ಪರಿಸರ ಮಾಲಿನ್ಯದಿಂದ ರೋಗಗಳು ಹರಡುತ್ತಿವೆ. ಪರಿಸರವನ್ನು ಶುದ್ಧ ಸ್ವಚ್ಛವಾಗಿಡಲು ಶ್ರಮಿಸಬೇಕು, ಇಲ್ಲದಿದ್ದರೆ ಮಾರಕ ರೋಗಗಳಿಗೆ ತುತ್ತಾಗಬೇಕಾಗುತ್ತದೆ. ಸ್ವಚ್ಛ ಪರಿಸರದಿಂದ ಆರೋಗ್ಯದ ಜೀವನ ನಡೆಸಬಹುದಾಗಿದೆ ಎಂದು ಹೇಳಿದರು. ಶಾಲಾ ಮುಖ್ಯ ಶಿಕ್ಷಕಿ ದೀಪ ಹಿರೇಮಠ, ಶಾಲಾ ಸಂಸ್ಥಾಪಕ ಅಧ್ಯಕ್ಷ ವಿ.ಎಸ್. ಹಿರೇಮಠ್ ಅಮೃತ ಹಿರೇಮಠ್, ಗೀತಾ ಭಜಂತ್ರಿ, ಲತಾ ಹಾವಣಗಿ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕನ್ನಡ ಸಾಹಿತ್ಯಕ್ಕೆ ಶರಣರು ನೀಡಿದ ಅಪೂರ್ವವಾದ ಕೊಡುಗೆ: ಜೆ. ಎಂ.ನಾಗಯ್ಯ




**ಧಾರವಾಡ :** ಕನ್ನಡ ಸಾಹಿತ್ಯಕ್ಕೆ ಶರಣರು ನೀಡಿದ ವಚನ ಸಾಹಿತ್ಯಒಂದುಅಪೂವ ರ್ವಾದಕೊಡುಗೆಯಾಗಿದೆ.ಆದರೆ ಕೆಲವೇ ಕೆಲವುವಚನಕಾರರಬಗೆಗೆಉಪನ್ಯಾಸಗಳು, ಚರ್ಚೆಗಳು, ಅಧ್ಯಯನಗಳು ನಡೆಯುತ್ತಿವೆ. ಕೆಳವರ್ಗಗಳಿಂದ ಬಂದ ಅನೇಕ ವಚನಕಾರರ ಬಗೆಗೆ ಚರ್ಚೆ ಸಂವಾದಗಳು ಇಲ್ಲವಾಗಿವೆ.

ಹೀಗಾಗಿ ಆದ್ಯವಚನಕಾರ ದೇವರದಾಸಿಮಯ್ಯನವರಂಥ ಮಹತ್ವದ ವಚನಕಾರರುಅಂಚಿಗೆತಳ್ಳಲ್ಪಟ್ಟಿದ್ದಾರೆಎಂದು ಧಾರವಾಡಕರ್ನಾಟಕ ವಿಶ್ವವಿದ್ಯಾಲಯದ ಪಂಪ ಅಧ್ಯಯನ ಪೀಠದ ಸಂಯೋಜ–ಕಡಾ.ಜೆ.ಎಂ.ನಾಗಯ್ಯಅವರುಹೇಳಿದರು. ಅವರುಕರ್ನಾಟಕ ವಿದ್ಯಾವರ್ಧಕ ಸಂಘವು.ಆದ್ಯ ವಚನಕಾರ 'ದೇವರ ದಾಸಿಮಯ್ಯ ಜಯಂತ್ಯೋತ್ಸವ' ದತ್ತಿ ಅಂಗವಾಗಿ ಆಯೋಜಿಸಿದ್ದ ಉಪನ್ಯಾಸಕಾರ್ಯಕ್ರಮದಲ್ಲಿ'ಶಾಸನಗಳಲ್ಲಿ ದೇವರ ದಾಸಿಮಯ್ಯ ಮತ್ತು ದುಗ್ಗಳೆ' ವಿಷಯಕುರಿತುಅತಿಥಿಉಪನ್ಯಾಸ ನೀಡಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದಅವರು, ದೇವರ ದಾಸಿಮಯ್ಯ ಮತ್ತುಜೇಡರ ದಾಸಿಮಯ್ಯ ಬೇರೆ ಬೇರೆಅಲ್ಲ. ಒಬ್ಬರೆಎಂಬುದನ್ನುಈ ಹಿಂದಿನ ವಿದ್ವಾಂಸರ ಅಭಿಪ್ರಾಯಗಳು ಈಗ ದೊರೆತ ಶಾಸನಗಳು ಮತ್ತುಕನ್ನಡ ಕಾವ್ಯಗಳನ್ನು ಆಧರಿಸಿ ದಾಸಿಮಯ್ಯನ ಬಗೆಗಿನ ಗೊಂದಲಗಳಿಗೆ ತೆರೆ ಎಳೆದರು.ದಾಸಿಮಯ್ಯನ ಹತ್ತು ಮತ್ತು ದುಗ್ಗಳೆಯ ಮೂರು ಶಾಸನಗಳನ್ನು ಎಳೆ ಎಳೆಯಾಗಿ ವಿಶ್ಲೇಷಿಸಿದರು.

ಅಧ್ಯಕ್ಷತೆ ವಹಿಸಿದ್ದ ಧಾರವಾಡ ಕ.ವಿ.ವಿಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಆರ್. ಎಂ.ಷಡಕ್ಷರಯ್ಯ ಮಾತನಾಡುತ್ತಾ, ದಾಸಿಮಯ್ಯನ ಚರಿತ್ರೆ ನಿರ್ಮಾಣಕ್ಕೆ ಪ್ರೊ. ಜೆ.ಎಂ. ನಾಗಯ್ಯನವರಅವರಉಪನ್ಯಾಸ ಪೂರಕವಾಗಿದೆಎಂದರು.

ಮುಖ್ಯಅತಿಥಿ ಮಹಾದೇವಕರಮರಿ ವಚನಕಾರರಕೊಡುಗೆಯನ್ನು ಸ್ಮರಿಸಿದರು. ದತ್ತಿದಾನಿ ಪ್ರಸನ್ನರಾಮಚಂದ್ರಗೆದ್ದೆಣ್ಣವರಅವರು ದಾಸಿಮಯ್ಯನ ಕುರಿತು ಬೆಳಕಿಗೆ ಬಂದ ಹೊಸ ಸಂಗತಿಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವಇಂಗಿತ ವ್ಯಕ್ತಪಡಿಸಿದರು. ವೇದಿಕೆ ಮೇಲೆ ಸಂಘದಅಧ್ಯಕ್ಷಚಂದ್ರಕಾಂತ ಬೆಲ್ಲದಉಪಸ್ಥಿತರಿದ್ದರು.

ಶಂಕರ ಕುಂಬಿ ಸ್ವಾಗತಿಸಿದರು.ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೀರಣ್ಣಒಡ್ಡೀನ ವಂದಿಸಿದರು.ಪ್ರೊ. ಧನವಂತ ಹಾಜವಗೋಳ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಬಸವಪ್ರಭು ಹೊಸಕೇರಿ, ಡಾ.ಶೈಲಜಾಅಮರಶೆಟ್ಟಿ, ಡಾ.ಮಹೇಶ ಧ. ಹೊರಕೇರಿ, ವಿಶ್ವೇಶ್ವರಿ ಹಿರೇಮಠ, ಶಿವಾನಂದ ಭಾವಿಕಟ್ಟಿ ಸೇರಿದಂತೆ ಮುಂತಾದವರಿದ್ದರು.

# ಹೆಸರು ಬೆಳೆಗೆ ಕೀಟಬಾಧೆ



**ಲಕ್ಷ್ಮೇಶ್ವರ :** ತಾಲೂಕಿನ ಮುಂಗಾರು ಹಂಗಾಮಿನ ಪ್ರಮುಖ ಬೆಳೆಯಾದ ಹೆಸರು ಬೆಳೆ ಈಗಾಗಲೇ ಬಿತ್ತನೆಯಾಗಿ ಬೆಳೆದು ಹೂ ಗಟ್ಟುವ ಸಮಯದಲ್ಲಿ ಹೆಸರು ಬೆಳೆಗೆ ಕೊಂಬು ಕೀಟ ಹುಳ ಬೆಳೆಯನ್ನು ನಾಶಪಡಿಸುತ್ತಿರುವುದು ರೈತರಲ್ಲಿ ಕಳವಳವನ್ನುಂಟು ಮಾಡಿದೆ.

ತಾಲೂಕಿನಾದ್ಯಂತ ರೈತರು ಸುಮಾರು ಎಂಟತ್ತು ಸಾವಿರ ಹೆಕ್ಟರ್ ಜಮೀನಿನಲ್ಲಿ ಹೆಸರು ಬೆಳೆ ಬಿತ್ತನೆ ಮಾಡಿದ್ದು ಈಗ ಈ ಬೆಳೆಗೆ ಕೊಂಬು ಕೀಟ ಎಲೆಗಳನ್ನು ತಿಂದು ಬೆಳೆಯನ್ನು ಹಾನಿ ಮಾಡುತ್ತಿದೆ.

ತಾಲೂಕಿನ ಅಡರಕಟ್ಟಿ ಸಮೀಪದ ರೈತ ಮಂಜುನಾಥ್ ನರೇಗಲ್ ಅವರ ಜಮೀನಿನಲ್ಲಿ ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ ಚಂದ್ರಶೇಖರ ಗೌಡ ನರಸಮ್ಮನವರ ಭೇಟಿ ನೀಡಿ ಪರಿಶೀಲನೆ ಮಾಡಿದ್ದು ಹೆಸರು ಬೆಳೆಗೆ ಹಸಿರು ಬಣ್ಣದ ಕೊಂಬು ಕೀಟ ಅಂದರೆ ಇದು ದೇಹದ ಹಿಂಭಾಗದಲ್ಲಿ ಚಿಕ್ಕದಾದ ಕೊಂಬನ್ನು ಹೊಂದಿದೆ.

ಇದು ಹೆಸರು ಎಳ್ಳು ಮತ್ತು ಉದ್ದಿನ ಬೆಳೆಯ ಬೆಳೆಗಳಿಗೆ ಹೆಚ್ಚು ಹಾನಿಯನ್ನು ಮಾಡುತ್ತದೆ ಎಂದು ಕೃಷಿ ಅಧಿಕಾರಿಗಳು ತಿಳಿಸಿದ್ದಾರೆ

ಕೊಂಬಿನ ಹುಳು ಹತೋಟಿ ಮಾಡಲು ಲ್ಯಾಂಬಡಾ ಸೈಹಾ ಲೋತಿನ್ ಕ್ರಿಮಿನಾಶಕವನ್ನು 16 ಲೀಟರ್ ನೀರಿನಲ್ಲಿ 25 ಎಂಎಲ್ ಬೆರೆಸಿ ಸಿಂಪಡಣೆ ಮಾಡಬೇಕು ಎಂದು ರೈತರಿಗೆ ಸಲಹೆ ನೀಡಿದ್ದಾರೆ.

ಈ ಕುರಿತು ಕೃಷಿ ಸಹಾಯಕ ನಿರ್ದೇಶಕರಾದ ರೇವಣಪ್ಪ ಮನಗೂಳಿ ಅವರು ರೈತರು ಹೆಸರು ಬೆಳೆ ಹೂವು ಕಾಯಿ ಕಟ್ಟುವ ಹಂತದಲ್ಲಿ ಇರುವುದರಿಂದ ಇಲಾಖೆಯ ಸಲಹೆಯನ್ನು ಪಡೆದುಕೊಂಡು ಕೊಂಬು ಕೀಟದ ಹುಳವನ್ನು ಹತೋಟಿಗೆ ತರಬೇಕು ಎಂದು ಹೇಳಿದ್ದಾರೆ.

# ಧಾರವಾಡದಲ್ಲಿ ಪಂ. ಪಂಚಾಕ್ಷರಗವಾಯಿಗಳ ಸ್ಮಾರಕ ನಿರ್ಮಾಣವಾಬೇಕು

**ಧಾರವಾಡ :** ಉತ್ತರದ ಸಂಗೀತವನ್ನು ದಕ್ಷಿಣಕ್ಕೆ ತಂದ ಪ್ರಮುಖರಲ್ಲಿ ಒಬ್ಬರಾದ, ಶಿಷ್ಯ ಪರಂಪರೆಯ ಮೂಲಕ ಧಾರವಾಡಕ್ಕೆ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದ ತವರು ಎನ್ನುವ ಖ್ಯಾತಿ ತಂದು ಕೊಟ್ಟ, ವಚನಗಳಿಗೆ ಸಂಗೀತ ಸಂಯೋಜಿಸಿ ಹಾಡಿ, ವಚನ ಗಾಯನ ಪರಂಪರೆಗೆ ನಾಂದಿ ಹಾಡಿದ, ಮಾತ್ರವಲ್ಲದೇ ಭಾರತ ರತ್ನ ಭೀಮಸೇನ ಜೋಷಿಯವರಂತಹ ಮಹಾನ ಸಂಗೀತ ದಿಗ್ಗಜರನ್ನು ಕೊಡುಗೆಯಾಗಿ ನೀಡಿದ ಶ್ರೇಯಸ್ಸು ಗಾನಯೋಗಿ ಪಂಚಾಕ್ಷರ ಗವಾಯಿಗಳವರಿಗೆ ಸಲ್ಲುತ್ತದೆ. ಇಂತಹ ಮಹಾನ್ ವಿಭೂತಿ ಪುರುಷ ಗಾನಯೋಗಿ ಪಂ. ಪಂಚಾಕ್ಷರ ಗವಾಯಿಗಳವರ ಸ್ಮಾರಕ ಧಾರವಾಡದಲ್ಲಿಆಗಬೇಕುಎಂದು,ಡಾ.ಪಂ. ಪುಟ್ಟರಾಜ ಸೇವಾ ಸಮಿತಿ ಸಂಸ್ಥಾಪಕರಾದ ವೇ. ಚನ್ನವೀರಸ್ವಾಮಿ ಹಿರೇಮಠ (ಕಡಣಿ) ಹೇಳಿದರು. ಅವರು ದಿನಾಂಕ 14 ರಂದು ಸಂಜೆ ಧಾರವಾಡದ ರಂಗಾಯಣದಲ್ಲಿ, ಗದುಗಿನ ಡಾ. ಪಂ. ಪುಟ್ಟರಾಜ ಸೇವಾ ಸಮಿತಿ ಆಯೋಜಿಸಿದ್ದ ಗಾನಯೋಗಿ ಪಂ. ಪಂಚಾಕ್ಷರ ಗವಾಯಿಗಳವರ 80ನೆಯ ಪುಣ್ಯಸ್ಮರಣೆ 'ಗುರುಗುಣಗಾನ' ಕವಿಗೋಷ್ಠಿ, ಕಾವ್ಯಗಾಯನ ಮತ್ತು ನೃತ್ಯ ನಮನವನ್ನು ಒಳಗೊಂಡ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿಕೊಂಡು ಮಾತನಾಡಿದರು.

ಡಾ.ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ವ್ಯವಸ್ಥಾಪಕರಾದ ಪ್ರಕಾಶ ಬಾಳಿಕಾಯಿ ಧಾರವಾಡ, ಕ. ವಿ. ವಿ. ಲಲಿತಕಲಾ ಹಾಗೂ ಸಂಗೀತ ಮಹಾವಿದ್ಯಾಲಯದ ಸಹಾಯಕ ಉಪನ್ಯಾಸಕರಾದ ಡಾ. ಎ. ಎಲ್ ದೇಸಾಯಿ, ಇವರುಗಳು ಮಾತನಾಡಿ, ಪಂಚಾಕ್ಷರ ಗುರುಗಳ ಹೆಸರು ಉಳಿಸುವ ನಿಟ್ಟಿನಲ್ಲಿ, ಕಂಚಿನ ಪ್ರತಿಮೆ ಸ್ಥಾಪನೆ ಮತ್ತು ಧಾರವಾಡದಲ್ಲಿ ಮಾದರಿಯ ಆಶ್ರಮ ಸ್ಥಾಪಸಲು ಪ್ರಯತ್ನಿಸುತ್ತಿರುವ ಬಗ್ಗೆ ತಿಳಿಸಿದರು. ಡಾ. ಸುಮಾ ಬಸವರಾಜ ಹಡಪದ, ಹಳಿಯಾಳ ದೇವಿಕಾ ಜೋಗಿ ಹೊಸಪೇಟೆ, ಡಾ. ಸುರೇಶ ಕಳಸಣ್ಣವರ ಕಲಘಟಗಿ ವೇದಿಕೆಯಲ್ಲಿ ಇದ್ದರು.

ಧಾರವಾಡದ ಶ್ರೀಗುರು ಪುಟ್ಟರಾಜ ಸಂಗೀತ ಶಾಲೆ, ವೀರಶೈವ ಜಾಗೃತಿ ಮಹಿಳಾ ಸಮಿತಿ, 'ಮಾಸ್ಟರ್' ಸಾತ್ವಿಕ್ ಜಿ. ಮಹಾಮನೆ ಇವರುಗಳು ಸಂಗೀತ ನಮನ ಸಲ್ಲಿಸಿದರು. ಹುಬ್ಬಳಿಯ ಪ್ರೇರಣಾ ಸ್ಕೂಲ್ ಆಫ್ ಡ್ಯಾನ್ಸ್, ಧಾರವಾಡದ ಉಪಾಧ್ಯ ನೃತ್ಯ ವಿಹಾರ, ತಾಳಿಕೊಟೆಯ ವಿರಕ್ತೇಶ್ವರ ಭರತನಾಟ್ಯ ತರಬೇತಿ ಸಂಸ್ಥೆ, ಮುಂಡರಗಿಯ ನಾಟ್ಯಬಿಂದು ಡ್ಯಾನ್ಸ್ ಅಕಾಡೆಮಿ, ಸಂಸ್ಥೆಯ ಶಿಷ್ಯರು ನೃತ್ಯ ನಮನ ಸಲ್ಲಿಸಿದರು.

ಡಾ. ಸುರೇಶ ಕಳಸಣ್ಣವರ ಕಲಘಟಗಿ ಇವರ ಅಧ್ಯಕ್ಷತೆಯಲ್ಲಿ, ಪಂಚಾಂಕ್ಷರ ಗವಾಯಿಗಳವರ ಕುರಿತು ಬರೆದ ಕವಿತೆಗಳ ಕವಿಗೋಷ್ಠಿಯಲ್ಲಿಮೃತ್ಯುಂಜಯಹಿರೇಮಠ, ಪ್ರೊ ಜಯಶ್ರೀ ಹಿರೇಮಠ, ಪದ್ಮಾ ಜೆ. ಕಬಾಡಿ,ವೀರಯ್ಯಸಂಕಿನಮಠ,ಬಸವರಾಜ ಹಡಪದ,ವಿಮಲಾಹುಬ್ಬಳ್ಳಿ.ಸಂಧ್ಯಾದೀಕ್ಷಿತ, ಸುಲೋಚನ ಮಾಲಿಪಾಟೀಲ್ ರೇಖಾ ಜೋಶಿ, ವೀರೇಶರಡ್ಡಿ ಟಿ. ಕಾಮರಡ್ಡಿ, ದಾನಮ್ಮ ವೀ ಅಂಗಡಿ, ಮಧುಮತಿ ಸಣಕಲ್, ಸೀತಾ ಛಪ್ಪರ, ಧಾರವಾಡ ಶಾರದಾ ಕೆಲಸಂಗದ, ಶಾಂತಕ್ಕ ಹೊಂಬಳ, ಇಂದಿರಾ ಮೋಟೆಬೆನ್ನೂರ, ಇವರುಗಳು ತಮ್ಮ ಕವನದ ಮೂಲಕ ಗುರು ಗುಣಗಾನ ಮಾಡಿದರು. ಶಶಿಕಲಾ ಅಕ್ಕಿ ಹಾವೇರಿ ಇವರು ಸ್ವಾಗತಿಸಿದರು. ಸುಧಾ ಕಬ್ಬೂರ ಇವರು ಕಾರ್ಯಕ್ರಮದ ನಿರೂಪಣೆ ಮಾಡಿ ವಂದನಾರ್ಪಣೆ ಸಲ್ಲಿಸಿದರು.

# ಧಾರವಾಡ ಜಿ.ಟಿ.ಟಿ.ಸಿ.ಯಲ್ಲಿ ನಡೆದ ವಿಶ್ವ ಯುವ ಕೌಶಲ್ಯ ದಿನಾಚರಣೆ

**ಧಾರವಾಡ :** ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಜಿ.ಟಿ.ಟಿ.ಸಿ, ಧಾರವಾಡದ ಸಂಯುಕ್ತಾಶ್ರಯದಲ್ಲಿ ಜಿ.ಟಿ.ಟಿ.ಸಿ, ಧಾರವಾಡ ದಲ್ಲಿ ವಿಶ್ವ ಯುವ ಕೌಶಲ್ಯ ದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ರವೀಂದ್ರ ಪಿ ದ್ಯಾಬೇರಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು, ಧಾರವಾಡ ರವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡರು, ಶಿವಾನಂದ ಕುಂಬಾರ, ಪ್ರಾಂಶುಪಾಲರು, ಜಿ.ಟಿ.ಟಿ.ಸಿ ಧಾರವಾಡ ರವರು ಅಧ್ಯಕ್ಷತೆಯನ್ನು ವಹಿಸಿದ್ದರು ಮತ್ತು ವಿದ್ಯಾರ್ಥಿಗಳಿಗೆ ಪ್ರಸ್ತುತ ಕೌಶಲ್ಯದ ಅವಶ್ಯಕತೆಯನ್ನು ತಿಳಿಸಿದರು. ಹಾಗೂ ಶಂಕರ ಮಂಚೆಗೌಡ, ರಾಷ್ಟ್ರೀಯ ತಿರ್ಪುಗಾರರು ಮತ್ತು ಅಂತರಾಷ್ಟ್ರೀಯ ಕೌಶಲ್ಯ ಸ್ಪರ್ಧೆ ತಜ್ಞರು, ಜಿ.ಟಿ.ಟಿ.ಸಿ, ಧಾರವಾಡ ರವರು ಮುಖ್ಯ ಭಾಷಣದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಕೌಶಲ್ಯ ಸ್ಪರ್ಧೆಗಳಿಗೆ ಭಾಗವಹಿಸಲು ಸತತ ಪ್ರಯತ್ನದಿಂದ ಸಾಧ್ಯವೆಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಜಿ.ಟಿ.ಟಿ.ಸಿ, ಧಾರವಾಡದ ವಿದ್ಯಾರ್ಥಿಗಳಾದ ಹಾಗೂ 2024ರ ರಾಷ್ಟ್ರೀಯ ಕೌಶಲ್ಯ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ವಿಜೇತರಾದ ಶಿವಾಜಿ ಧೊಂಡಿ ಮತ್ತು ಬಸವರಾಜ ಹಣಗಿ ರವರನ್ನು ಸನ್ಮಾನಿಸಲಾಯಿತು.

# ಸೂಕ್ತ ಪ್ರೋತ್ಸಾಹದಿಂದ ಅಪೂರ್ವ ಪ್ರತಿಭೆಗಳು ಹೊರಹೊಮ್ಮಲು ಸಾಧ್ಯ: ಪ್ರೊ. ವೀರೇಶ ಪಾಟೀಲ

**ರಾಯಬಾಗ :** ಉತ್ಸಾಹದ ಕಾರಂಜಿಯಾದ ವಿದ್ಯಾರ್ಥಿಗಳಿಗೆ ಅವರ ಶೈಕ್ಷಣಿಕ ಜೀವನದಲ್ಲಿ ಶಿಕ್ಷಕರು ಮನಃಪೂರ್ವಕವಾಗಿ ಸೂಕ್ತ ಪ್ರೋತ್ಸಾಹ ನೀಡಿದರೆ ಅಪೂರ್ವ ಪ್ರತಿಭೆಗಳು ಹೊರಹೊಮ್ಮಲು ಸಾಧ್ಯ ಎಂದು ಸದಲಗಾದ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ವೀರೇಶ ಪಾಟೀಲ ನುಡಿದರು.

ಅವರು ಜುಲೈ 16 ರಂದು ಶಿರಗುಪ್ಪಿಯ ಕೆ. ಎಲ್. ಇ. ಸಂಸ್ಥೆಯ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಪ್ರಸಕ್ತ ಸಾಲಿನ ಪ್ರಥಮ ಪಿ.ಯು.ಸಿ. ವಿದ್ಯಾರ್ಥಿಗಳ ಸ್ವಾಗತ, ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು. ಪ್ರತಿಭಾ ಪ್ರದರ್ಶನ ಹಾಗೂ ಕೌಶಲ್ಯ ಪ್ರದರ್ಶನಕ್ಕೆ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಪೂರಕವಾಗಿರುತ್ತವೆ. ಜೀವನದಲ್ಲಿ ಕುಂಟುನೆಪಹೇಳುವವರಿಂದಯಾವಕೆಲಸವೂಆಗಲಾರದು.ಜೀವನದಲ್ಲಿ ತನ್ನಿಂದ ಈ ಕಾರ್ಯ ಮಾಡಲು ಸಾಧ್ಯ ಎಂದು ಹೇಳುವವರು ಮಾತ್ರ ಜೀವನದಲ್ಲಿಮುಂದೆಬರುತ್ತಾರೆ.ತಾವೆಲ್ಲರೂಅಪ್ರತಿಮಸಾಧನೆಮಾಡಲು ಆತ್ಮವಿಶ್ವಾಸ, ದೃಢಸಂಕಲ್ಪ, ಪ್ರಾಮಾಣಿಕ ಪ್ರಯತ್ನ, ಕಠಿಣ ಪರಿಶ್ರಮ, ಮೈಗೂಡಿಸಿಕೊಂಡು ಅದ್ವಿತೀಯ ಸಾಧಕರಾಗಿ ಹೊರಹೊಮ್ಮಬೇಕೆಂದು ಸೂಚ್ಯವಾಗಿ ಹೇಳಿದರು. ಕಳೆದ ಶೈಕ್ಷಣಿಕ ವರ್ಷದಲ್ಲಿ ಅತಿ ಹೆಚ್ಚು ಅಂಕ ಪಡೆದ ಸಾಧಕ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಶಾಲು ಹೊದಿಸಿ ಫಲ ತಾಂಬೂಲ ನೀಡಿ ಸತ್ಕರಿಸಿ ಗೌರವಿಸಲಾಯಿತು. ಸ್ಥಾನಿಕ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಶಿವಾನಂದ ಬಿ. ಪಾಟೀಲ ಅವರು ಅಧ್ಯಕ್ಷತೆ ವಹಿಸಿದ್ದರು.

ವರದಿ : ಡಾ. ಜಯವೀರ ಎ.ಕೆ.

# ಕಲಾವಿದ ಮಾಳಿಗೆ ಪ್ರಶಸ್ತಿ



**ಮಹಾಲಿಂಗಪುರ :** ಸಮೀಪದ ಮದಭಾಂವಿ ಗ್ರಾಮದ ಪೇಟೆ ಮಾಸ್ತರ್ ಎನಿಸಿದ ಹಾರ್ಮೋನಿಯಂ ಕಲಾವಿದ ರಾಮಪ್ಪ ನಿಂಗಪ್ಪ ಮಾಳಿ ಅವರಿಗೆ ಕೌಜಲಗಿ ನಿಂಗಮ್ಮ ಪ್ರಶಸ್ತಿ ದೊರೆತಿದೆ. ಬಾಗಲಕೋಟ ಜಿಲ್ಲಾ ಸಂಚಲನದಲ್ಲಿ, ಬ್ಯಾಕೋಡ ಗ್ರಾಮದ ಲಕ್ಕಮ್ಮದೇವಿ ಕಲಾಪೋಷಕ ಸಂಘದವರು ಬಾದಾಮಿಯಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಅಖಿಲ ಕರ್ನಾಟಕ ದ್ವಿತೀಯ ಬಯಲಾಟ ಉತ್ಸವ, 4ನೇ ಜಾನಪದ ನೃತ್ಯ ಕಲಾ ಉತ್ಸವ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. 6ನೇ ವಯಸ್ಸಿನಿಂದಲೇ ಸಂಗೀತ ಕಲಾ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ರಾಮಾಯಣ, ಬಯಲಾಟ, ಅಮೇಚ್ಯೂರ ನಾಟಕ ನಿರ್ದೇಶನ ಮಾಡಿದ್ದಲ್ಲದೇ ಭಜನಾ ಸೇವೆಯಲ್ಲಿ ನಿರತರಾಗಿದ್ದಾರೆ.

# ಬಂತೋ ಮೋರಮ ರಾಜೇಕ ಪ್ರೇಮಾ

ಜನಪದರ ಹಬ್ಬಗಳ ಆಚರಣೆಯಲ್ಲಿ ಮೊಹರಮ್ ಹಬ್ಬವು ಒಂದು. ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಈ ಹಬ್ಬವನ್ನು ಹಿಂದೂ ಮುಸ್ಲಿಂ ಬಾಂಧವರು ಕೂಡಿ ಆಚರಿಸುತ್ತಾರೆ.ಹಳ್ಳಿಗಳಲ್ಲಿ 'ಅಲಾಯ' ಹಬ್ಬವೆಂದು ಕರೆಯಲಾಗುವ ಮೊಹರಂ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಾರೆ. ಮೊಹರಂ ತಿಂಗಳಲ್ಲಿ ಚಂದ್ರದರ್ಶನವಾದ ದಿನವೇ ಮಸೀದೆ ಮುಂದೆ ಗ್ರಾಮದ ಮುಲ್ಲಾನ ಹಿರಿತನದಲ್ಲಿ ಊರ ಹಿರಿಯರು ಕೂಡಿಕೊಂಡು ಗುದ್ದಲಿ ಪೂಜಾ ಸಮಾರಂಭ ನೆರವೇರಿಸುತ್ತಾರೆ. ಬೆಂಕಿ ಹಾಕುವ ಹೊಂಡ



ಮಾಡುವ ಸಲುವಾಗಿ ತಗ್ಗು ತೊಡುತ್ತಾರೆ. ಇದನ್ನೇ 'ಗುದ್ಲಿ ಬಿತ್ತು' ಎನ್ನುತ್ತಾರೆ. ಈ ಗುದ್ದಲಿ ಬಿದ್ದ ಆಚರಣೆಯ ಐದನೆಯ ದಿನಕ್ಕೆ ದೇವರು ಕೂಡ್ರಿಸುವ ಕಾರ್ಯಕ್ರಮ ಜರುಗುತ್ತದೆ.ಕೂಡ್ರಿಸಿದ ಈ ದೇವರುಗಳಾದ ಗಜ್ಜಿಪೀರಾ, ಲಾಲಸಾಹೇಬ, ಹಸನ ಹುಸೇನಿಗಳಿಗೆ ಹಿಂದೂ ಮುಸ್ಲಿಮರು ಕೂಡಿಯೇ ಭಯ ಭಕ್ತಿಯಿಂದ ನಡೆದುಕೊಳ್ಳುತ್ತಾರೆ.ದೇವರುಗಳಿಗೆ ಗಂಧ ಏರಿಸುವ ಕಾರ್ಯಕ್ರಮ ಕತ್ತಲ ರಾತ್ರಿ ದಿವಸ ಮಾದಲಿ.ಚೊಂಗೆ,ಮೊದಲಾದ ಸಿಹಿ ತಿನಿಸುಗಳನ್ನು ಮಾಡಿ ನೈವೇದ್ಯ ಹಿಡಿಯುತ್ತಾರೆ.

ಮೊಹರಮ್ ಹಬ್ಬಕ್ಕೆ ಇಸ್ಲಾಂ ಧರ್ಮದಲ್ಲಿ ಐತಿಹಾಸಿಕ ಹಿನ್ನೆಲೆ ಇದೆ.ಸುಮಾರು ಹದಿನಾಲ್ಕನೆಯ ಶತಮಾನದಿಂದ ಇದು ಭಾರತದಲ್ಲಿ ಆಚರಣೆಗೊಳ್ಳುತ್ತಿದೆ.ಹಜರತ್ ಮಹಮದ್ ಪೈಗಂಬರರು ಮಾನವ ಕಲ್ಯಾಣಕ್ಕಾಗಿ ಶ್ರಮಿಸಿ ,ಇಸ್ಲಾಂ ರೀತಿಯ 'ಪ್ರಜಾಪ್ರಭುತ್ವ'ವನ್ನು ಸ್ಥಾಪಿಸಿದರು.ಅವರ ನಂತರ ಖಲೀಫರಾಗಿ ಹಲವರು ಈ ಇಸ್ಲಾಂ ಪ್ರಜಾಪ್ರಭುತ್ವವನ್ನು ನ್ಯಾಯಯುತವಾಗಿ ಮುನ್ನಡೆಸಿದರು. ಮುಂದೆ ಖಲೀಫರಾಗಲು ಪೈಪೋಟಿ ನಡೆದು ಹಜರತ್ ಇಮಾಮಿ ಹುಸೇನರಿಗೂ ಮತ್ತು ಯಜೀದನಿಗೂ ಯುದ್ದವೇ ನಡೆಯಿತು. ಯೇಜೀದನ ಗುಂಪು ಇಮಾಮ ಹುಸೇನರನ್ನು ಮೋಸದಿಂದ ಕೊಲೆಗೈಯಿತು. ಮೋಸಕ್ಕೆ ಜಯವಾಯಿತು, ಧರ್ಮಕ್ಕೆಸೋಲಾಯಿತು.ಹಜರತ್ಇಮಾಮಿ ಹುಸೇನರು ವೀರಮರಣ ಹೊಂದಿದರು.



ಇದಕ್ಕೆ 'ಕರ್ಬಲಾ ದುರಂತ'ವೆಂದು ಕರೆಯಲಾಗುತ್ತದೆ.ಹಜರತ್ ಇಮಾಮಿ ಹುಸೇನರ ಆತ್ಮಕ್ಕೆ ಶಾಂತಿ ಸಿಗಲೆಂದು ಮೊಹರಂ ತಿಂಗಳಲ್ಲಿ ಮುಸ್ಲಿಮ್ ಬಾಂಧವರು ಉಪವಾಸ ವ್ರತ,ಕುರಾನ್ ಪಠಣ,ದಾನ ಧರ್ಮ ಕಾರ್ಯಗಳಲ್ಲಿ ತೊಡಗಿ ಆ ದುಃಖದ ದಿನವನ್ನು ನೆನೆಸಿಕೊಂಡು ಈ ರೀತಿಯಲ್ಲಿ ಆಚರಿಸುತ್ತಾರೆ.

ಇದು ಕಾಲ ಕ್ರಮೇಣ ಪರ್ಶಿಯನ್ ಮೂಲದ ರಾಜರ ಪ್ರಭಾವದಿಂದ ಭಾರತಕ್ಕೆ ಕಾಲಿರಿಸಿತು. ತನ್ನ ಮೂಲ ಆಶಯದೊಂದಿಗೆ ಮೊಹರಂ ಭಾರತದಲ್ಲಿ ನಡೆಯಲಾರಂಭಿಸಿತು. ಹಿಂದೂಗಳು ಸೇರಿಕೊಂಡರು. ಮೊಗಲ್ ಚಕ್ರವರ್ತಿಗಳು ಈ ಹಬ್ಬಕ್ಕೆ ಪ್ರೋತ್ಸಾಹ ನೀಡಿದರು. ಬಹಮನಿ ಆದಿಲ್ ಶಾಹಿ ಸುಲ್ತಾರಂತೂ ವ್ಯಾಪಕ ಮನ್ನಣೆ ಕೊಟ್ಟರು. ಕಾಲಾಂತರದಲ್ಲಿ ಈ ಮೊಹರಮ್ ಹಬ್ಬದ ಸ್ವರೂಪವೇ ಬದಲಾಗುತ್ತ ಬಂದಿತು. ಸಾಮ್ರಾಟ್ ಅಕ್ಬರ್ 'ದಿನ್ ಎ ಇಲಾಹಿ' ಸ್ಥಾಪಿಸಿದ ನಂತರ ಮೊಹರಮ್ ಹಬ್ಬ ರಾಷ್ಟ್ರೀಯ ಹಬ್ಬವಾಗಿ ಮಾರ್ಪಾಡಾಯಿತು. ಶೋಕ ಮೂಲದ ಮೊಹರಮ್ ಆಚರಣೆ ಮರೆಯಾಗಿ ಇಂದು ಸಂತೋಷ ,ಸಂಭ್ರಮದ ಹಬ್ಬವಾಗಿ ಕರ್ನಾಟಕದಲ್ಲಿ ಆಚರಣೆಯಲ್ಲಿದೆ. ಗುದ್ದಲಿ ಹಾಕಿದ ದಿನದಿಂದ ದೇವರು ಹೊಳೆಗೆ ಹೋಗುವ ದಿನದವರೆಗೆ ಹತ್ತು



ದಿನಗಳ ಕಾಲ ಮೊಹರಮ್ ಆಚರಿಸುತ್ತಾರೆ. ಕರ್ಬಲಾ ಯುದ್ದದಲಿ ಬಲಿಯಾದ ಹಸೇನ ಹುಸೇನ ಮತ್ತು ಅವರ ತಂಡದ ವ್ಯಕ್ತಿಗಳ ಪ್ರತೀಕವಾಗಿ ಕೈ ಆಕಾರದ 'ಜಂಬಾ' ಎಂದು ಕರೆಯಲ್ಪಡುವ ತಗಡಿನ ಸಾಧನಗಳನ್ನು ಪ್ರತಿಷ್ಠಾಪಿಸುವರು. ಇವು ಐದು ದಿನಗಳ ಕಾಲ ಇರುತ್ತವೆ. ಪ್ರತಿಷ್ಠಾಪಿಸುವ ಮೊದಲು ಮೊಹರಂ ತಿಂಗಳ ಚಂದ್ರದರ್ಶನವಾದ ದಿನ 'ಪಂಜಾ' ದೇವರುಗಳು ಕೂಡುವ ಸ್ಥಳದ ಮುಂದೆ ಒಂದು ತಗ್ಗು ತೋಡುವರು.ಇದಕ್ಕೆ 'ಹವಾಲಾ' ಎಂದು ಕರೆಯುವರು.ಇದಾದ ಐದನೆಯ ದಿನಕ್ಕೆ 'ಪಂಜಾ' ದೇವರುಗಳ ಪ್ರತಿಷ್ಠಾಪನೆಯಾಗುವುದು. ದೇವರು ಪ್ರತಿಷ್ಠಾಪನೆಯಾದ ದಿನದಿಂದ ಐದುದಿನಗಳ ಕಾಲ ಒಂದೊಂದು ದಿನ ಒಂದೊಂದು ಸಿಹಿ ತಿಂಡಿ ಮಾಡಿ ನೈವೇದ್ಯ ಮಾಡುವರು. ಮಾದಲಿ,ಘೋಡೆ ಎಂಬ ಗೋದಿ ಹಿಟ್ಟಿನ ತುಂಡುಗಳು,ಶರಬತ್ತುಗಳನ್ನು ಮಾಡುವರು. ಐದನೆಯ ದಿನ ಚೊಂಗೆ ಮಾಡುವರು. ಐದನೆಯ ದಿನ ದೇವರ ವಿಸರ್ಜನೆಗೆ 'ದೇವರು ಹೊಳೆಗೆ ಹೋಗುತ್ತವೆ' ಎನ್ನುವರು.

ಈ ಸಂದರ್ಭದಲ್ಲಿ ಹಬ್ಬದ ಐದು ದಿನವೂ ಸಣ್ಣ ದೊಡ್ಡವರು ಕೂಡಿಕೊಂಡು ಅಲಾಯಿ ಕುಣಿಯ ಸುತ್ತಲು 'ಧೂಲಾ ಧೂಲಾ' ಎಂದು ಹೇಳುತ್ತ ಕುಣಿದು ಕುಪ್ಪಳಿಸುವ ದೃಶ್ಯ ಸಾಮಾನ್ಯವಾಗಿರುತ್ತದೆ. ಜೊತೆಗೆ ಊರ ಕರ್ಬಲಾ ಮೇಳಗಳು ಎರಡು ತಂಡಗಳಾಗಿ ಹಲಗೆ ವಾದ್ಯದೊಡನೆ ಹೆಜ್ಜೆ ಕುಣಿತ ಕುಣಿಯುತ್ತಾ ಲೇಜಿಮ್ ಬಾರಿಸುತ್ತಾ ,ಕರಬಲಾ ಹಾಡು ಹೇಳುತ್ತಾ ದೇವರು ಕುಳಿತ ಸ್ಥಳಕ್ಕೆ ಬಂದು ಬೆಳಗು ಹರಿಯುವವರೆಗೂ ಹಾಡು ಹೇಳುತ್ತಾರೆ.ಇವೆ 'ರಿವಾಯತ ಪದ'ಗಳಾಗಿ ಜನಜನಿತವಾಗಿವೆ.

**ಮೊದಲಿಗಿ ನೆನೆದಿನೋ**
**ಅಲ್ಲಾನ ನಾಮಾ**
**ಪ್ರಥಮಕ ನೆನುವೆನೋ ಶಿವನ ಧ್ಯಾನಾ.**
**ಮೋರಮ ರಾಜೇಕ ಪ್ರೇಮಾ**
**ಹಸನ ಹುಸೇನಿ ನಾಮಾ**
**ಆತೋ ಪಾವನಾ.**

ರಿವಾಯತ ಪದಗಳು ಸರಳ ನಿರೂಪಣೆ ಮತ್ತು ಭಾಷಾ ಶೈಲಿಯಿಂದ ಗ್ರಾಮೀಣ ಸೊಗಡನ್ನು ತುಂಬಿಕೊಡುತ್ತವೆ. ಮೊಹರಂ ಸಂದರ್ಭದಲ್ಲಿ ಹಾಡು ಹೇಳುವ ಆಚರಣೆ ಇಂದು ಬಹಳಷ್ಟು ಮರೆಯಾಗುತ್ತಿದೆ. ಒಟ್ಟಾರೆ ಹಿಂದೂ ಮುಸ್ಲಿಮರ ಬಾಂಧವ್ಯದ ಸಂಕೇತವಾಗಿ ಆಚರಿಸಲ್ಪಡುವ ಈ ಹಬ್ಬದಲ್ಲಿ ಇಸ್ಲಾಂ ಧರ್ಮಕ್ಕೆ ಸಂಬಂಧಪಟ್ಟ ಪದಗಳಲ್ಲದೆ ಮಹಾಭಾರತದ ಯುದ್ಧದ ಘಟನೆಗಳನ್ನು, ಭಾರತ ಸ್ವಾತಂತ್ರ್ಯ ಹೋರಾಟದ ಸಂದರ್ಭಗಳು ಇದರಲ್ಲಿ ಬರುತ್ತವೆ. ಇಂಥ ಅಪೂರ್ವ ಸಾಮಗ್ರಿಗಳನ್ನು ತುಂಬಿಕೊಂಡ ರಿವಾಯತ ಪದಗಳತ್ತ ಜಾನಪದ ಆಸಕ್ತರ ದೃಷ್ಟಿ ವಿಶೇಷವಾಗಿ ಹರಿಯಬೇಕಾಗಿದೆ.


* * *

। ಡಾ. ಪ್ರಕಾಶ ಗ.ಖಾಡೆ
ವಿಳಾಸ : ಮನೆ ನಂ. ಎಸ್.135,
ಬಡಾವಣೆ ಸಂಖ್ಯೆ 63,
ನವನಗರ, ಬಾಗಲಕೋಟೆ–587103
ಮೊ. 9845500890

ಚಿತ್ರಗಳು : ಸಂಗಮೇಶ ಬಡಿಗೇರ

# ಬಾಳು ಬೆಳಗುವ ಪುಸ್ತಕಕ್ಕೊಂದು ಬರಹ

ಶಂಕರಾನಂದರ "ಸಕ್ಸಸ್ ಇನ್ ಮೈ ಹ್ಯಾಂಡ್ಸ್ 'ಎಂಬ ವ್ಯಕ್ತಿತ್ವ ವಿಕಸನದ ಪುಸ್ತಕವನ್ನು ನನ್ನ ಶಾಲಾ ಗ್ರಂಥಾಲಯದಿಂದ ತೆಗೆದುಕೊಂಡು ಬಹುದಿನಗಳ ನಂತರ ಓದು ಆರಂಭಿಸಿದೆ. ಅದಕ್ಕೆ ಕಾರಣ ಪುಸ್ತಕದ ಆಕರ್ಷಕ ಶೀರ್ಷಿಕೆ. ಒಂದೇ ವಾಕ್ಯದಲ್ಲಿ ಹೇಳುವುದಾದರೆ ಇದೊಂದು ಯಶಸ್ವಿ ವಿದ್ಯಾರ್ಥಿಗಳ ಬದುಕಿಗೆ ಬೈಬಲ್.




ಪ್ರಸ್ತುತ ದಿನಮಾನದಲ್ಲಿ ವಿದ್ಯಾರ್ಥಿಗಳು ಓದಿನಿಂದ ದೂರ ಉಳಿಯುತ್ತಿರುವುದು ಹತಾಶೆ– ನಿರಾಶೆ ಮುಂತಾದ ಸಂಕಟಗಳಿಂದ ಬಳಲುತ್ತಿರುವುದು ಸರ್ವೇಸಾಮಾನ್ಯ. ಅಂಥವರ ಬದುಕಿಗೆ ಈ ಕಿರು ಹೊತ್ತಿಗೆ 'ಚುಚ್ಚುಮದ್ದು' ಆಗಬಲ್ಲದು. ತಮ್ಮಲ್ಲಿ ಭರವಸೆ ಇರುವ ಮನುಷ್ಯರು ಹಾಗೂ ತಮ್ಮ ಶ್ರದ್ಧೆಯನ್ನು ನಂಬುವ ಮನುಷ್ಯರು ಅವರ ಯಶಸ್ಸಿನ ಹಾದಿಯ ನಕ್ಷೆಯನ್ನು ಅವರೇ ಸೃಷ್ಟಿಸಿಕೊಳ್ಳುತ್ತಾರೆ. ಗೆಲುವಿನ ರುಚಿ ಹಾಗೂ ಗೆಲುವಿನ ಮೂಲಕ ಸಿಗುವ ಸಂತಸ ಯಾವಾಗಲೂ ಗೆಲುವಿನ ಮನುಷ್ಯನಾಗುವ ಒಂದು ಅಭ್ಯಾಸವನ್ನೇ ನಿಮ್ಮಲ್ಲಿ ಛಾಪಿಸಿ ಬಿಡುತ್ತದೆ.

ಈ ಪುಸ್ತಕ 75 ಕಿರು ಅಧ್ಯಾಯಗಳನ್ನು ಹೊಂದಿದ್ದು ಅವೆಲ್ಲವೂ ಯಶಸ್ಸಿನ ಹಾದಿಯಲ್ಲಿ ನಡೆಯುವವರಿಗೆ 75 ಹೆಜ್ಜೆ ಗುರುತುಗಳು. ಗೆಲ್ಲುವವರು ಎಂದು ತನ್ನಿಂದ ಸಾಧ್ಯವಿಲ್ಲ ಎಂದು ಕೈಚಲ್ಲಿ ಕುಳಿತುಕೊಳ್ಳುವುದಿಲ್ಲ. ಒಬ್ಬ ಮನುಷ್ಯನ ವಿಜಯಿ ವ್ಯಕ್ತಿತ್ವವು ಪ್ರಕಟವಾಗುವುದೇ ಅತಂಕದ ಸನ್ನಿವೇಶಗಳಲ್ಲಿ. ಒಬ್ಬ ವಿಜಯಿ ವ್ಯಕ್ತಿ ಆತಂಕಗಳಲ್ಲಿ ಅವಕಾಶಗಳನ್ನು ಕಾಣುತ್ತಾನೆ .ಎಂತಹ ಸಂದರ್ಭಗಳೇ ಬಂದರು

ಎದೆಗುಂದದೆ ಪ್ರತಿಯೊಂದು ಸನ್ನಿವೇಶದಲ್ಲಿಯೂ ಒಳ್ಳೆಯ ಸದಾವಕಾಶವನ್ನು ಹೊಂದುವವನೇ ನಿಜವಾದ ಸಾಧಕ. ಶಂಕರಾನಂದರ ಬರಹ ಆಕರ್ಷಕ ಮತ್ತು ಪ್ರತಿಯೊಬ್ಬರನ್ನು ಓದಿಸಿಕೊಂಡು ಹೋಗುವಂಥದ್ದು. ಅಧ್ಯಾಯದ ಆರಂಭದಲ್ಲಿ ಮಹಾ ಕಾವ್ಯಗಳ ನುಡಿಮುತ್ತು, ಮಹಾನ್ ತತ್ವಜ್ಞಾನಿಗಳ ಸಾಧಕರ ಅನುಭವದ ಉತ್ಸಾಹಿ ಮಾತುಗಳಿಂದ ಆರಂಭವಾಗುವುದೇ ಭೂಷಣ. ಅಂಬೇಡ್ಕರ್ ರವರು "ಎಷ್ಟು ಹೆಚ್ಚು ಓದುತ್ತಿರೋ ಅಷ್ಟು ಹೆಚ್ಚು ಹೆಚ್ಚು ವಿಷಯಗಳು ನಿಮಗೆ ತಿಳಿಯುತ್ತವೆ, ಎಷ್ಟು ಹೆಚ್ಚು ಜ್ಞಾನವಂತರಾಗುತ್ತಿರೋ ಅಷ್ಟು ಸಾಧನೆಗಳನ್ನು ನೀವು ಮಾಡುತ್ತೀರ" ಎಂಬ ಮಾತು ಅದೆಷ್ಟು ಅರ್ಥಗರ್ಭಿತ !

ಒಳ್ಳೆಯ ಪುಸ್ತಕಗಳ ಓದು ಬದುಕು ರೂಪಿಸುತ್ತವೆ. ಗೆಲುವು ತಂದು ಕೊಡುತ್ತವೆ,ಜೊತೆಗೆ ವಿದ್ಯಾರ್ಥಿ ಜೀವನಕ್ಕೆ ಮೋಕ್ಷ ಕಲ್ಪಿಸುತ್ತವೆ.

* * *

**ಪುಸ್ತಕ : ಸಕ್ಸಸ್ ಇನ್ ಮೈ ಹ್ಯಾಂಡ್ಸ್**
**ಲೇಖಕರು: ಶಂಕರಾನಂದ.**
**ಪುಟಗಳು: 208**
**ಬೆಲೆ: ರೂ. 180**



* * *

– ಸಿದ್ದು ಹೊಸಪೇಟಿ

# ಮಾನಸಿಕ ಆರೋಗ್ಯ ಕುರಿತು ಉಪನ್ಯಾಸ

**ವಿಜಯಪುರ :** ನಗರದ ಜ್ಞಾನ ಯೋಗ ಆಶ್ರಮದಲ್ಲಿ ಇನ್ನರ್ವಿಲ್ ಕ್ಲಬ್ ವತಿಯಿಂದ ಮಾನಸಿಕ ಆರೋಗ್ಯ ಕುರಿತು ಉಪನ್ಯಾಸ ಕಾರ್ಯಕ್ರಮ ಜರುಗಿತು.

ಬಿಎಲ್‌ಡಿಇ ಸಂಸ್ಥೆಯ ಮನೋವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಸಂತೋಷ ರಾಮದುರ್ಗ ಅವರು ಮಾನಸಿಕ ಆರೋಗ್ಯದ ಬಗ್ಗೆ ಉಪನ್ಯಾಸವನ್ನು ನೀಡಿ–ದರು.

ಇದೇ ಸಂದರ್ಭದಲ್ಲಿ ಡಾ. ನಿರ್ಮಲಾ ಅವರು ಜೀವನ ಕೌಶಲ್ಯದ ಬಗ್ಗೆ ಮಾತನಾಡಿದರು.

ಶ್ರೀಮತಿ ಸುಖಲತಾ ಬಿರಾದರವರು ಯೋಗ ತರಬೇತಿಯನ್ನು ನೀಡಿದರು.

ಕಾರ್ಯಕ್ರಮದಲ್ಲಿ ಇನ್ನರ್ವೀಲ್ ಕ್ಲಬ್ ಅಧ್ಯಕ್ಷೆ




ನಿರ್ಮಲಾ ದೊಡ್ಮನಿ, ಸುಕಲತಾ ಬಿರಾದಾರ, ಶುಭದಾ ನಾವದಿಗಿ, ಶಾಂತ ಕೋರೆಡ್ಡಿ, ಸಂಗೀತ ಮೇಂದ್ರಕರ್, ಪ್ರೀತಿ ತೋಸ್ನಿವಾಲ್ ಮತ್ತು ಯೋಗೇನ್ ತಂಡದವರು ಉಪಸ್ಥಿತರಿದ್ದರು.

## ತೇರದಾಳ ಪುರಸಭೆಗೆ ಆಡಳಿತಾಧಿಕಾರಿ ಭೇಟಿ

# ದೂರುಗಳು ಬಂದರೆ ಕ್ರಮ ಪಕ್ಕಾ: ಶ್ವೇತಾ

**ತೇರದಾಳ :** ಇಲ್ಲಿನ ಪುರಸಭೆ ಆಡಳಿತಾಧಿಕಾರಿ ಶ್ವೇತಾ ಬೀಡಕಾರ ಮಂಗಳವಾರ ಪುರಸಭೆ ಕಚೇರಿಗೆ ಬೇಟಿ ನೀಡಿ ಸದಸ್ಯರುಗಳ ಜತೆಗೆ ಚರ್ಚೆ ಹಾಗೂ ಸಿಬ್ಬಂದಿಗಳ ಸಭೆ ನಡೆಸಿದರು.

ಸದಸ್ಯರು ಹಾಗೂ ಸಾರ್ವಜನಿಕರ ಸಭೆಯಲ್ಲಿ ಆರೋಗ್ಯ ವಿಭಾಗದ ಇರ್ಫಾನ ಝಾರೆ ಹಾಗೂ ಕಂದಾಯ ವಿಭಾಗದ ಸಮೀರ ಅವರ ದರ್ಬಾರ ಕುರಿತು ಶಿವಾನಂದ ನಡುವಿನಕೇರಿ ಹಾಗೂ ಶಿವಾನಂದ ಕಾಂಬಳೆ ಎಸಿ ಅವರಿಗೆ ದೂರು ಹೇಳಿದರು. ಜನನ ಪ್ರಮಾಣ ಪತ್ರ ನೀಡಲು ಝಾರೆ ಅವರು ಸಾವಿರಗಟ್ಟಲೆ ಬಡವರ ಹತ್ತಿರ ಹಣ ಕೇಳುತ್ತಾರೆ. ಇಷ್ಟೊಂದು ಏಕೆ ಎಂದು ವಿಚಾರಿಸಿದರೆ ಇಲ್ಲಸಲ್ಲದ ಕಾರಣ ನೀಡುತ್ತಾರೆಂದು ಶಿವಾನಂದ ನಡುವಿನಕೇರಿ ಆರೋಪಿಸಿದರು. ಕಂದಾಯ ವಿಭಾಗ ಸಮೀರ ಸರಿಯಾಗಿ ಕಚೇರಿಗೆ ಬರುವುದಿಲ್ಲ. ಮದ್ಯಾಹ್ನದ ವೇಳೆಗೆ ಆಗಮಿಸುತ್ತಾರೆ. ಇದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆ




ಆಗುತ್ತಿದೆ ಎಂದು ಶಿವಾನಂದ ಕಾಂಬಳೆ ಆಪಾದಿಸಿದರು. ಆಡಳಿತಾಧಿಕಾರಿ ಶ್ವೇತಾ ಬೀಡಕಾರ ಯಾವುದೇ ಸಿಬ್ಬಂದಿ ಇರಲಿ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂಧಿಸದ ದೂರುಗಳು ಬಂದರೆ ಕ್ರಮ ಕೈಗೊಳ್ಳುವುದು ನಿಶ್ಚಿತ. ಇಬ್ಬರು ಅಧಿಕಾರಿಗಳ ಕುರಿತು ಲಿಖಿತವಾಗಿ ದೂರು ಕೊಡಿ ಎಂದು ಆರೋಪ ಮಾಡಿದವರಿಗೆ ಹೇಳಿದರು.

ನಗರೋತ್ಥಾನ ಕಾಮಗಾರಿಗಳು ಅರ್ಧಕ್ಕೆ ನಿಂತಿವೆ. ಅತ್ತ ನಿರಂತರ ಕುಡಿಯುವ ನೀರಿನ ಯೋಜನೆ ಅರ್ಧಕ್ಕೆ ಕೈ ಬಿಟ್ಟಿದ್ದರಿಂದ ಅಗೆದ ರಸ್ತೆಗಳಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ. ವಸತಿ ಯೋಜನೆ ಮನೆಗಳಿಗೆ ಕೇಂದ್ರ ಸರಕಾರದ ಅನುದಾನ ಇನ್ನೂ ಜಮೆ ಆಗಿಲ್ಲ ಸೇರಿದಂತೆ ಹಲವು ಸಮಸ್ಯೆಗಳ ಕುರಿತು ಸದಸ್ಯ ಸಂತೋಷ ಜಮಖಂಡಿ, ಪಜಲ್ ಅತಾರಾವುತ್, ಶಂಕರ ಕುಂಬಾರ, ಗೌತಮ ರೋಡಕರ, ಸಂಗಮೇಶ ಕಾಲತಿಪ್ಪಿ, ಸದಾಶಿವ ಹೊಸಮನಿ ಎಸಿ ಅವರ ಗಮನಕ್ಕೆ ತಂದರು. ಅಗೆದಿರುವ ರಸ್ತೆಗಳಿಗೆ ತಾತ್ಕಾಲಿಕವಾಗಿ ಕ್ರಮ ಕೈಗೊಳ್ಳಲಾಗುವುದು.

ನಗರೋತ್ಥಾನ ಹಾಗೂ ಕೇಂದ್ರ ಸರಕಾರ ಅನುದಾನ ಕುರಿತು ಜಿಲ್ಲಾಧಿಕಾರಿಗಳ ಜತೆಗೆ ಚರ್ಚಿಸಲಾಗುವುದು ಎಂದು ಶ್ವೇತಾ ಬೀಡಕಾರ ತಿಳಿಸಿದರು.

ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ ಅವರಿಗೆ ಹಲವು ಸಲಹೆ ಸೂಚನೆಗಳನ್ನು ನೀಡಿದರು.

ಕಚೇರಿ ವ್ಯವಸ್ಥಾಪಕ ಮಲ್ಲಿಕಾರ್ಜುನ ಬಿರಾದಾರಪಾಟೀಲ, ಅಭಿಯಂತರಿ ಭಾಗ್ಯಶ್ರೀ ಪಾಟೀಲ, ಪ್ರತಾಪ ಕೊಡುಗೆ ಇದ್ದರು.

# ಮತದಾನ ಮಾಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ: ಆರ್.ಎಸ್. ತುಂಗಾಳ

**ಕೊಲ್ಹಾರ :** ದೇಶ ಕಂಡ ಅತ್ಯುನ್ನತ ನಾಗರಿಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ,ಚುನಾವಣೆಯಲ್ಲಿ ಮತದಾನ ಮಾಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ ಎಂದು ತಾಲೂಕಿನ ಹಣಮಾಪುರ ಗ್ರಾಮದ ಗ್ರಾಮೀಣ ವಿದ್ಯಾವರ್ಧಕ ಸಂಘದ ಪ್ರೌಢಶಾಲೆಯ ಮುಖ್ಯೋಪಾಧ್ಯಯ ಆರ್ ಎಸ್ ತುಂಗಾಳ ಹೇಳಿದರು.

ಗ್ರಾಮೀಣ ವಿದ್ಯಾರ್ಥಿ ಸಂಘದ ಪ್ರೌಢಶಾಲೆಯ 2024–25 ನೇ ಸಾಲಿನ ಶಾಲಾ ಸಂಸತ್ತು ರಚನೆಯ ಚುನಾವಣಾ ಪ್ರಕ್ರಿಯೆಯ ಕಾರ್ಯಕ್ರಮದಲ್ಲಿ ಮಾತನಾಡಿ ದೇಶದ ಸುಭದ್ರ ಆಡಳಿತಕ್ಕೆ



ನಾಗರಿಕನ ಮತದಾನದ ಹಕ್ಕು ಪ್ರಾಮುಖ್ಯತೆ ಪಡೆದುಕೊಂಡಿ–ದೆ. ಅದರಂತೆ ಶಾಲಾ ಮಕ್ಕಳಿಗೆ ಪ್ರಜಾಪ್ರಭುತ್ವದಲ್ಲಿನ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನದ ಮಹತ್ವ ಮತ್ತು ಮತದಾರರ ಕರ್ತವ್ಯವನ್ನು ಮಕ್ಕಳಿಗೆ ತಿಳಿಸಿದರು, ಈ ಸ್ಪರ್ಧೆಯಲ್ಲಿ 8, 9 ಮತ್ತು 10ನೇ ವರ್ಗದ 20 ವಿದ್ಯಾರ್ಥಿಗಳು ಚುನಾವಣೆಗೆ ಸ್ಪರ್ಧೆ ಮಾಡಿದ್ದು, ಅದರಲ್ಲಿ ಅತಿ ಹೆಚ್ಚು ಮತಗಳನ್ನು ಪಡೆದು–ಕೊಂಡ 12 ವಿದ್ಯಾರ್ಥಿಗಳನ್ನು ಶಾಲಾ ಸಂಸತ್ತು ಚುನಾವಣೆಗೆ ಆಯ್ಕೆ ಮಾಡಲಾಯಿತು. ಪ್ರಧಾನಮಂತ್ರಿಯಾಗಿ ಕುಮಾರಿ ಶ್ರೀರಕ್ಷಾ ಕುಲಕರ್ಣಿ, ಹಣಕಾಸು ಸಚಿವೆಯಾಗಿ ಕುಮಾರಿ ಕವಿತಾ ಕುಳ್ಳೊಳಿ, ಸಭಾಪತಿಯಾಗಿ ಮಾಚು ಮಡಿವಾಳರ್, ಮತ್ತು ವಿರೋಧ ಪಕ್ಷದ ನಾಯಕನಾಗಿ ಮುತ್ತು ಮಾಚಕನೂರು, ಹಾಗೂ ಇತರರನ್ನು ಸಚಿವ ಸಂಪುಟ ಸಚಿವರನ್ನಾಗಿ ಆಯ್ಕೆ ಮಾಡುವ ಸಂದರ್ಭದಲ್ಲಿ ಶಾಲಾ ಮಕ್ಕಳು ಮತದಾನದಲ್ಲಿ ಪಾಲ್ಗೊಂಡರು. ಆಯ್ಕೆಗೊಂಡ ವಿದ್ಯಾರ್ಥಿಗಳಿಗೆ ಪುಷ್ಪಗುಚ್ಛವನ್ನು ವಿತರಿಸುವುದರ ಮೂಲಕವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು, ಚುನಾವಣಾ ಉಸ್ತುವಾರಿಯನ್ನು ಸಮಗ್ರವಾಗಿ ಶಿಕ್ಷಕರಾದ ವಿಜಯ ಎಚ್. ಮತ್ತು ಎಸ್ ಎಸ್ ಮುದ್ಗಲ್ ನಿರ್ವಹಿಸಿದರು. ಮತ್ತು ಪಿ ಆರ್ ಓ ಎಸ್ ಎಲ್ ಪವಾರ, ಎಸ್ ಎಂ ಬರಗಿ,ಆರ್ ಟಿ ಸಜ್ಜನ್. ಸೆಕ್ಟರ್ ಆಫೀಸರ್ ಎಂ.ಎಸ್ ದೇಸಾಯಿ. ಹಾಗೂ ಶಿಕ್ಷ–ಕೇತರ ಸಿಬ್ಬಂದಿ ವರ್ಗದವರಾದ ಮೂರ್ತಜಸಾಬ್ ಕಂಬೋಗಿ, ಎಚ್ ಪಿ ಭಜಂತ್ರಿ ಇದ್ದರು.

# ಗಳಿಕೆಯಲ್ಲಿ ಮಿತ ಬಳಕೆಯಿದ್ದರೆ, ಉಳಿಕೆಯಾಗುವುದು

**ರಬಕವಿ :** ಉಳಿತಾಯಕ್ಕೆ ಮಿತವ್ಯಯ ತೀರಾ ಅವಶ್ಯಕ. ದುಡಿದ ಹಣದಲ್ಲಿ ಒಂದಿಷ್ಟು ತೆಗೆದಿರಿಸಬೇಕು. ಉಳಿತಾಯ ಮಾಡಿದ ಹಣಕ್ಕೆ ಹೆಚ್ಚಿನ ಮಹತ್ವ ಇರುತ್ತದೆ. ಸಮಯಕ್ಕೆ ಆಗದ ಅರ್ಥ, ಸಹಸ್ರವಿದ್ದರೂ ವ್ಯರ್ಥ. ಮಾಡಿರುವ ಗಳಿಕೆಯಲ್ಲಿ ಮಿತವಾಗಿ ಬಳಕೆಯಾದರೆ ಉಳಿಕೆಯಾಗುವುದು ಖಚಿತ ಎಂದು ಹಿರಿಯ ಸಾಹಿತಿ ಮೃತ್ಯುಂಜಯ ರಾಮದುರ್ಗ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ, ತಾಲೂಕಾ ಘಟಕ ರಬಕವಿ ಬನಹಟ್ಟಿ, ವಲಯಗಳು ತೇರದಾಳ, ಮಹಾಲಿಂಗಪುರ ಇವರ ಸಂಯುಕ್ತಾಶ್ರಯದಲ್ಲಿರಬಕವಿಯ ಬಸವನಗರ ಹನ್ನೊಂದನೇ ಕ್ರಾಸ್ನಲ್ಲಿರುವ ಸುರೇಶ ಪಟ್ಟಣಶೆಟ್ಟಿ ಇಂಜಿನೀಯರ್‌ಅವರನಿವಾಸದಲ್ಲಿ ನಡೆದ ಪುಸ್ತಕಾವಲೋಕನ–31 ಕಾರ್ಯಕ್ರಮದಲ್ಲಿ ಮಾಜಿ ಸಚಿವೆ ಲೀಲಾದೇವಿಆರ್.ಪ್ರಸಾದ್‌ಅವರ 'ಮಹಿಳೆ ಮತ್ತು ಉಳಿತಾಯ' ಕೃತಿಯನ್ನು ಅವಲೋಕಿಸಿ ಅವರು ಮಾತನಾಡಿದರು.

ಮಿತವ್ಯಯದಿಂದ ಹಣದ ಉಳಿತಾಯ, ಉಳಿತಾಯದಿಂದ ದೇಶಕ್ಕೂ ಲಾಭ ನಿಶ್ಚಿತ. ಉಳಿತಾಯ ಮನೆಯಿಂದಲೇ ಪ್ರಾರಂಭವಾಗಬೇಕು. ಇದಕ್ಕೆ



ಪ್ರೇರಕ ಶಕ್ತಿ ಮಹಿಳೆಯರು ಎಂಬುವುದರಲ್ಲಿ ಎರಡು ಮಾತಿಲ್ಲ. ಆಧುನಿಕ ಕಾಲದ ಮಹಿಳೆಯರು ಐಷಾರಾಮಿ ಜೀವನದಿಂದ ದೂರ ಸರಿದು ಕುಟುಂಬದ ಕಲ್ಯಾಣಕ್ಕಾಗಿ ಉಳಿತಾಯ ಮಾಡುವುದು ಒಳಿತು. ಗೃಹಿಣಿಯು ಮನಸ್ಸು ಮಾಡಿದರೆ ಉಳಿತಾಯ ಮಾಡುತ್ತಾ ಮನೆಯನ್ನು ನಂದಗೋಕುಲ ಮಾಡಲು ಸಾಧ್ಯವೆಂದು ರಾಮದುರ್ಗ ಹೇಳಿದರು.

ಹಿರಿಯ ಸಾಹಿತಿ ಸಿದ್ದರಾಜ ಪೂಜಾರಿ ಮಾತನಾಡಿ ಜಗತ್ತಿನ ಸಂಸ್ಕೃತಿಯ ತೇರು ಎಳೆದವರು ಮಹಿಳೆಯರು. ತುಳಿತ ಕ್ಕೊಳ್ಳಗಾದವರು ಮಹಿಳೆಯರು. ಪುಸ್ತಕಾವಲೋಕನ ಓದುಗರನ್ನು ಸಿದ್ಧಗೊಳಿಸುವ ಗಮನಾರ್ಹ ಕಾರ್ಯಕ್ರಮವಾಗಿದೆ. ಇಲ್ಲಿ ವೈಜ್ಞಾನಿಕ ಚರ್ಚೆಗಳಾಗಲಿ ಎಂದರು.

ಮಹಾಶಾಂತ ಶೆಟ್ಟಿ ಮಾತನಾಡಿ, ಮಹಿಳೆಯರು ಅಷ್ಟೇ ಅಲ್ಲ ಪುರುಷರೂ ಉಳಿತಾಯ ಮಾಡುವುದು ಅವಶ್ಯಕ ಎಂದರು.

ಈ ಸಂದರ್ಭದಲ್ಲಿ ರವೀಂದ್ರ ಅಷ್ಟಗಿ, ಬಸಯ್ಯ ವಸ್ತ್ರದ, ವೈ. ಬಿ. ಕೊರಡೂರ, ಮಹದೇವ ಕವಿಶೆಟ್ಟಿ, ಶಿವಾನಂದ ಬಾಗಲಕೋಟಮಠ, ವಿಜಯಕುಮಾರ ಹಲಕುರ್ಕಿ, ಮಲ್ಲೇಶಪ್ಪ ಕುಚನೂರ, ಡಾ. ರವಿ ಜಮಖಂಡಿ, ವಿಜಯಪುರದ ಸಾಹಿತಿ ಸಿದ್ದಣ್ಣ ಉತ್ನಾಳ ಸಂವಾದದಲ್ಲಿ ಪಾಲ್ಗೊಂಡಿದ್ದರು.

ಇಂಜಿನಿಯರ್ ಸುರೇಶ ಶಂಕರಪ್ಪ ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿ ಓದುವ ಅಭಿರುಚಿ ಹೆಚ್ಚಿಸುವ ಪುಸ್ತಕಾವಲೋಕನದ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ತಾಲೂಕಾ ಕಸಾಪ ಅಧ್ಯಕ್ಷ ಮ. ಕೃ. ಮೇಗಾಡಿ ಪ್ರಾಸ್ತಾವಿಕವಾಗಿ ಮಾತನಾಡಿ ಕನ್ನಡ ನುಡಿ ತೇರನ್ನು ಕನ್ನಡ ಮನಸ್ಸುಗಳೆಲ್ಲಾ ಒಂದಾಗಿ, ಚೆಂದಾಗಿ ಮುನ್ನಡೆಸಲು ಹಿರಿಯ ಸಾಹಿತಿಗಳು, ಎಲ್ಲಾ ಮಾಧ್ಯಮದವರು, ಸಾಹಿತ್ಯಾಸಕ್ತರ ಪ್ರೋತ್ಸಾಹ ಸಹಕಾರಿಯಾಗಿದೆ ಎಂದರು.

ಪುಸ್ತಕಾವಲೋಕನಕ್ಕೆ ಆರು ತಿಂಗಳು ಅಗತ್ಯ ಪುಸ್ತಕಗಳನ್ನು ನೀಡುವುದಾಗಿ ವಾಗ್ದಾನ ಮಾಡಿದ ಮಲ್ಲೇಶಪ್ಪ ಕುಚನೂರ, ಐವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ರಬಕವಿ–ಬನಹಟ್ಟಿ ತಾಲೂಕಾ ಕಸಾಪ ಘಟಕಕ್ಕೆ ಕೊಡುವುದಾಗಿ ಅನುಪಮ ಪ್ರಕಾಶನದ ಸಿದ್ದಣ್ಣ ಉತ್ನಾಳ ಅವರು ಸನ್ಮಾನ ಸ್ವೀಕರಿಸಿ ಮಾತನಾಡಿ ಕಸಾಪ ನಿರಂತರ ಕ್ರಿಯಾಶೀಲವಾಗಿರಬೇಕು. ಆ ದಿಶೆಯಲ್ಲಿ ರಬಕವಿ–ಬನಹಟ್ಟಿ ತಾಲೂಕಾ ಘಟಕ ಮನೆ ಮನೆಗೆ ಸಾಹಿತ್ಯವನ್ನು ಮುಟ್ಟಿಸುವ ಕಾರ್ಯ ಮಾಡುತ್ತಿರುವುದು ಪ್ರಶಂಸನೀಂಯವಾಗಿದೆ. ಉತ್ತಮ ಕಾರ್ಯಕ್ರಮದ ಪ್ರಭಾವಕ್ಕೆ ಒಳಗಾಗಿ ನಾನು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿಜಯಪುರದಿಂದ ಬಂದೆ ಎಂದರು.

ಶಿವಾನಂದ ದಾಶ್ಯಾಳ, ಯಶವಂತ ವಾಜಂತ್ರಿ, ಪರಪ್ಪ ಪೂಜಾರಿ, ಡಾ. ಸಂಗಮೇಶ ಹತಪಾಕಿ, ನಗರಸಭಾ ಸದಸ್ಯೆ ಗೌರಿ ಮಿಳ್ಳಿ, ಸವಿತಾ ಹೊಸೂರ, ಸುಭದ್ರಾ ಪೂಜಾರಿ, ಹೇಮಾ ಸುರೇಶ ಪಟ್ಟಣಶೆಟ್ಟಿ, ಪ್ರಭಾವತಿ ಕೋಟ್ಯಾಳ, ಶ್ರೀಶೈಲ ಬುರ್ಲಿ, ಡಿ. ಬಿ. ಜಾಯಗೊಂಡ, ಈರಣ್ಣ ಗಣಮುಖಿ ಭಾಗವಹಿಸಿದ್ದರು.

ರತ್ನಾ ಝುಳಕಿ, ಶ್ವೇತಾ ದುಂಬಾಳೆ ಪ್ರಾರ್ಥಿಸಿದರು. ಶರತ್ ಜಂಬಗಿ ಸ್ವಾಗತಿಸಿದರು. ಎನ್. ಎನ್. ಬೇವೂರ ಸೊಗಸಾಗಿ ನಿರೂಪಿಸಿದರು. ದಾನಪ್ಪ ಆಸಂಗಿ ವಂದಿಸಿದರು.

# ಮೈದುಂಬಿ ಹರಿಯುತ್ತಿರುವ ಕೃಷ್ಣೆ

## ಹಿಪ್ಪರಗಿ ಜಲಾಶಯಕ್ಕೆ 20,790 ಕ್ಯೂಸೆಕ್ ನೀರು



**ರಬಕವಿ–ಬನಹಟ್ಟಿ :** ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶಗಳಲ್ಲಿ ಮಳೆಯಾಗುತ್ತಿರುವುದರಿಂದ ಸಮೀಪದ ಕೃಷ್ಣಾನದಿ ತುಂಬಿ ಹರಿಯುತ್ತಿದ್ದು , 20,790 ಕ್ಯೂಸೆಕ್ ನೀರು ಹಿಪ್ಪರಗಿ ಜಲಾಶಯಕ್ಕೆ ಹರಿದು ಬರುತ್ತಿದೆ.

ಮಹಾರಾಷ್ಟ್ರದ ರಾಜಾಪೂರ ಜಲಾಶಯದಿಂದ ನೀರು ಭಾರೀ ಪ್ರಮಾಣದಲ್ಲಿ ಕೃಷ್ಣಾ ನದಿಗೆ ಹರಿದು ಬರುತ್ತಿದ್ದು , ಕಳೆದ ಕೆಲವು ದಿನಗಳಿಂದ ಉತ್ತಮ ಪ್ರಮಾಣದ ನೀರು ಹರಿದು ಬಂದಿದೆ.

ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶಗಳಾದ ಕೊಯ್ನಾ 184 ಮಿ.ಮೀ., ನೌಜಾ 274 ಮಿ.ಮೀ., ಮಹಾಬಳೇಶ್ವರ 99 ಮಿ.ಮೀ., ತಾರಳಿ 108 ಮಿ.ಮೀ., ವಾರಣಾ 132 ಮಿ.ಮೀ., ರಾಧಾನಗರಿ 78 ಮಿ.ಮೀ., ದೂಧಗಂಗಾ 39 ಮಿ.ಮೀ. ಮಳೆಯಾಗಿರುವುದರಿಂದ ಹಿಪ್ಪರಗಿ ಜಲಾಶಯಕ್ಕೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದೆ. ಉತ್ತಮ ಮಳೆಯಾಗುತ್ತಿರುವುದರಿಂದ ಇಂದು ಹಿಪ್ಪರಗಿ ಜಲಾಶಯಕ್ಕೆ ಒಟ್ಟು 20,790 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, 20,040 ಕ್ಯೂಸೆಕ್ಸ್ ನೀರನ್ನು ಹೊರಗೆ ಹರಿ ಬಿಡಲಾಗುತ್ತಿದೆ. 6 ಟಿಎಂಸಿ ಸಾಮರ್ಥ್ಯದ ಹಿಪ್ಪರಗಿ ಜಲಾಶಯ 3.06 ಟಿಎಂಸಿ ನೀರು ಸಂಗ್ರಹವಿದ್ದು, ನೀರಿನ ಮಟ್ಟ 521.50 ಮೀ. ಇದೆ ಎಂದು ತಹಶೀಲ್ದಾರ ಗಿರೀಶ ಸ್ವಾದಿ ತಿಳಿಸಿದ್ದಾರೆ.

# ಮುಂಗಾರು ಹಂಗಾಮಿನ ಬೆಳೆ ಸ್ಪರ್ಧೆಗೆ ಅರ್ಜಿ ಆಹ್ವಾನ

**ಕೊಪ್ಪಳ :** 2024–25ನೇ ಸಾಲಿನ ಕೃಷಿ ಪ್ರಶಸ್ತಿಯಡಿ ಮುಂಗಾರು ಹಂಗಾಮಿನ ಕೃಷಿ ಪ್ರಶಸ್ತಿ ಕಾರ್ಯಕ್ರಮದಡಿ ಬೆಳೆ ಸ್ಪರ್ಧೆಗೆ ಆಸಕ್ತ ರೈತ ಹಾಗೂ ರೈತ ಮಹಿಳೆಯರಿಂದ ಆನ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ.

ಕೃಷಿ ಪ್ರಶಸ್ತಿ ಹಾಗೂ ಕೃಷಿ ಪಂಡಿತ ಪ್ರಶಸ್ತಿ ಕಾರ್ಯಕ್ರಮಗಳನ್ನು ಆನ್‌ಲೈನ್ ಮೂಲಕ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದ್ದು, ಕೊಪ್ಪಳ ಜಿಲ್ಲೆಯ ಆಸಕ್ತ ರೈತರು ಕೃಷಿ ಇಲಾಖೆಯ ಕೆ–ಕಿಸಾನ್ ಪೋರ್ಟಲ್ ನಲ್ಲಿ ಕೃಷಿ ಪ್ರಶಸ್ತಿಯಡಿ ಬೆಳೆ ಸ್ಪರ್ಧೆಗೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದಾಗಿದೆ.

ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆ ಮಾಡಿದ ಬೆಳೆಗಳು: ರಾಜ್ಯ ಮಟ್ಟದಲ್ಲಿ ಸ್ಪರ್ಧೆಗಾಗಿ ಜಿಲ್ಲೆಯ ನೀರಾವರಿ ಮತ್ತು ಮಳೆಯಾಶ್ರಿತ ಮುಂಗಾರು ಭತ್ತ ಹಾಗೂ ಮಳೆಯಾಶ್ರಿತ ಮುಂಗಾರು ಬೆಳೆಗಳಾದ ಶೇಂಗಾ, ನವಣೆ, ಸಜ್ಜೆ, ತೊಗರಿ ಪೂರ್ಣಬೆಳೆ ಮತ್ತು ಮುಸುಕಿನ ಜೋಳ ಬೆಳೆಗಳಿಗೆ ರೈತರು ಅರ್ಜಿ ಸಲ್ಲಿಸಬಹುದಾಗಿದೆ.

ಕೃಷಿ ಪ್ರಶಸ್ತಿಯಡಿ ಮುಂಗಾರು ಹಂಗಾಮಿನ ಬೆಳೆ ಸ್ಪರ್ಧೆಗೆ ಅರ್ಜಿಸಲ್ಲಿಸಲು ಆಗಸ್ಟ್ 31 ಕೊನೆಯ ದಿನವಾಗಿದ್ದು, ಆಸಕ್ತ ರೈತರು ಸಿಟಿಜನ್ ಲಾಗಿನ್ ಅಥವಾ ಆರ್‌ಎಸ್‌ಕೆ ಲಾಗಿನ್ ಮೂಲಕ ಹತ್ತಿರದ ರೈತ ಸಂಪರ್ಕ ಕೇಂದ್ರ, ಸೇವಾ ಕೇಂದ್ರಗಳಲ್ಲಿ ಸ್ವತಃ ಆಸಕ್ತ ರೈತ ಮತ್ತು ರೈತ ಮಹಿಳೆಯರು ಪ್ರತ್ಯೇಕವಾಗಿ ಕೆ–ಕಿಸಾನ್ ಪೋರ್ಟಲ್ ಮುಖಾಂತರ ಅಗತ್ಯ ಮಾಹಿತಿಗಳೊಂದಿಗೆ ತಮ್ಮ ಎಫ್‌ಐಡಿ ( ಫ್ರೂಟ್ ಐಡಿ) ಅನ್ನು ಬಳಸಿಕೊಂಡು ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಹಾಗೂ ಆನ್‌ಲೈನ್ ಅರ್ಜಿ ಸಲ್ಲಿಸಲು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭೋರ್ಗರೆಯುತ್ತಿರುವ ಕೃಷ್ಣಾನದಿ: ಮಹಿಷವಾಡಗಿ ಬಳಿಯ ಅಸ್ಕಿ ಗ್ರಾಮದಿಂದ ಬೋಟ ಸೇವೆ

**ರಬಕವಿ–ಬನಹಟ್ಟಿ :** ಮಳೆಗಾಲ ಆರಂಭಗೊಂಡ ನಂತರ ಜೂನ್ ತಿಂಗಳಲ್ಲಿ ಸಾಧಾರಣ ಮಳೆಯಾಗಿತ್ತು. ನದಿ ಅಷ್ಟೊಂದು ಪ್ರಮಾಣದಲ್ಲಿ ಉಕ್ಕಿ ಹರಿದಿರಲಿಲ್ಲ. ಈಗ ಜುಲೈ ತಿಂಗಳಲ್ಲಿ ಕಳೆದ ಒಂದೆರಡು ದಿನಗಳಲ್ಲಿ ಕೃಷ್ಣಾ ನದಿ ಜಲಾನಯನ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಸುರಿಯುತ್ತಿರುವುದರಿಂದ ನದಿ ತುಂಬಿ ಹರಿಯುತ್ತಿರುವುದರಿಂದ ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.



ಕೃಷ್ಣೆ ಈಗ ತನ್ನ ಎರಡು ಒಡಲುಗಳ ಮುಖಾಂತರ ಮೈದುಂಬಿ ರಭಸದಿಂದ ಹರಿಯುತ್ತಿದ್ದಾಳೆ. ಇದರಿಂದ ನದಿ ಆಶ್ರಯದಿಂದಲೇ ಅನೇಕ ನೀರಾವರಿ ಯೋಜನೆಗಳ ಕಾಲುವೆಗಳಿಗೂ ನೀರು ತುಂಬಿ ಹರಿಯಲು ಆರಂಭಿಸಿದೆ. ರಬಕವಿ ಹತ್ತಿರದ ಮಹಿಷವಾಡಗಿ ಸೇತುವೆ ಸಂಪೂರ್ಣ ಮುಳುಗಿ ಹೋಗಿದ್ದು, ಅಲೆಗಳ ರಭಸ ಹೆಚ್ಚಾಗಿ ಸೆಳೆತವಿರುವ ಕಾರಣ ಇಲ್ಲಿನ ಬೋಟ ಸೇವೆಯನ್ನು ರದ್ದುಗೊಳಿಸಿ, ಕೆಳಭಾಗದ ಅಸ್ಕಿ ಮಹಿಷವಾಡಗಿ ನದಿ ಮಾರ್ಗದಲ್ಲಿ ನದಿ ವಿಶಾಲವಾಗಿ ಹರವಿಕೊಂಡು ಹರಿಯುವು ದರಿಂದ ಅಲ್ಲಿ ಅಲೆಗಳು ಶಾಂತವಾಗಿರುವುದರಿಂದ ಅಲ್ಲಿಂದ ಬೋಟ ಸೇವೆ ಆರಂಭಿಸಲಾಗಿದೆ ಎಂದು ತಾಲೂಕು ಆಡಳಿತ ಪತ್ರಿಕೆಗೆ ತಿಳಿಸಿದೆ.

ಸಧ್ಯಕ್ಕೆ ಯಾವುದೇ ಪ್ರವಾಹದ ಬೀತಿ ಇಲ್ಲ. ಮುನ್ನೆಚ್ಚರಿಕೆ ಕ್ರಮವಾಗಿ ಸುರಕ್ಷತೆ ದೃಷ್ಟಿಯಿಂದ ನದಿ ಪಾತ್ರದಲ್ಲಿ ವಾಸಿಸುವ ಜನರು ಜಾನುವಾರುಗಳ ಸಮೇತ ಸುರಕ್ಷಿತ ಸ್ಥಳಗಳಿಗೆ ಹೋಗುವುದು ಉತ್ತಮ ಎಂದು ತಾಲೂಕು ಆಡಳಿತ ತಿಳಿಸಿದೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State